# ECHO OF HIS CALL

## ಕರೆಯ ಪ್ರತಿಧ್ವನಿ

KANNADA

GOLDEN JUBILEE
ECHO OF HIS CALL
1969-2019
REACHING NATIONS

**India's National Spiritual Newspaper**

₹ 10/-

Published monthly in ENGLISH, TAMIL, MALAYALAM, TELUGU, HINDI, KANNADA, MARATHI, BENGALI, GUJARATI, ODIYA, ASSAMESE, PUNJABI, NEPALI, URDU, SINHALA & AFRIKAN

Editor : S. SAM SELVA RAJ | 16 Languages | Associate Editor : Rev. R. Rama Krishna

Vol. XXV | SEPTEMBER 2023 | No. 08




### ಪರಿಶುದ್ಧ ಸತ್ಯವೇದ

ಈ ಕೆಳಗಿನ ವಚನಗಳನ್ನು ದಯಮಾಡಿ ಕಂಠ ಪಾಠ ಮಾಡಿರಿ.

ಕೀರ್ತನೆ 101:1-8

1. ಪ್ರೀತಿನೀತಿಗಳನ್ನು ಕುರಿತು ಹಾಡುವೆನು; ಯೆಹೋವನೇ, ನಿನ್ನನ್ನು ಕೊಂಡಾಡುವೆನು.
2. ಸನ್ಮಾರ್ಗವನ್ನು ಲಕ್ಷಿಸಿ ನಡೆಯುವನು; ನನಗೆ ಯಾವಾಗ ದರ್ಶನಕೊಡುವಿ? ಮನೆಯೊಳಗೂ ಯಥಾರ್ಥ ಹೃದಯದಿಂದಲೇ ಪ್ರವರ್ತಿಸುವೆನು.
3. ಯಾವ ನೀಚವಾದ ಕಾರ್ಯವನ್ನೂ ದೃಷ್ಟಿಸುವದಿಲ್ಲ; ದುರಾಚಾರವನ್ನು ಹಗೆಮಾಡುತ್ತೇನೆ, ಅದರ ಗೊಡವೆಯೇ ನನಗೆ ಬೇಡ.
4. ಮೂರ್ಖತನವು ನನ್ನನ್ನು ಬಿಟ್ಟುಹೋಗಲಿ; ಕೆಟ್ಟತನವನ್ನು ಅರಿಯದಿರುವೆನು.
5. ಗುಪ್ತದಲ್ಲಿ ನೆರೆಯುವನ ಮೇಲೆ ಚಾಡಿ ಹೇಳುವವನನ್ನು ಸಂಹರಿಸುವೆನು; ಸೊಕ್ಕಿನ ಕಣ್ಣೂ ಉಬ್ಬಿದ ಮನಸ್ಸು ಉಳ್ಳವನನ್ನು ಸಹಿಸುವದಿಲ್ಲ.
6. ದೇಶದಲ್ಲಿರುವ ನಂಬಿಗಸ್ತರನ್ನು ಆರಿಸಿಕೊಳ್ಳುವೆನು ಅವರೇ ನನ್ನ ಸನ್ನಿಧಿಯಲ್ಲಿ ವಾಸಿಸ ಬೇಕು. ಸನ್ಮಾರ್ಗಿಯೇ ನನ್ನ ಸೇವೆಯಲ್ಲಿರಬೇಕು.
7. ಮೋಸಗಾರನು ನನ್ನ ಮನೆಯಲ್ಲಿರಲೇ ಬಾರದು; ಸುಳ್ಳುಗಾರನು ನನ್ನ ಮುಂದೆ ನಿಲ್ಲಕೂಡದು.
8. ಯೆಹೋವನ ಪಟ್ಟಣದಲ್ಲಿ ಕೆಡುಕರೇ ಉಳಿಯದಂತೆ ಪ್ರತಿದಿನವೂ ಬೆಳಗಿನಲ್ಲಿ ದೇಶದ ದುಷ್ಟರನ್ನು ಸಂಹರಿಸುತ್ತಾ ಬರುವೆನು.



# ಭಯಪಡಬೇಡ !

**FEAR NOT!** - ಯೆಶಾಯ 41:10

### ಈ ಸಂದೇಶವು ನಿಮ್ಮ ನಂಬಿಕೆಯನ್ನು ವಿಮೋಚಿಸುತ್ತದೆ! ಆಸಕ್ತಿಯಿಂದ ಓದಿರಿ!!

### ಪಾ. ಸ್ಯಾಮ್ ಸೆಲ್ವರಾಜ್

ನಾನು ಪ್ರತಿದಿನ ಬೆಳಿಗ್ಗೆ ಏಳುವಾಗ ಅನೇಕ ಸಮಸ್ಯೆಗಳನ್ನು ಎದುರಿಸುತ್ತೇನೆ ಅವುಗಳನ್ನು ವಿವರಿಸುವದಕ್ಕೆ ಆಗುವುದಿಲ್ಲ ಎಂದು ಅನೇಕ ಜನರು ಹೇಳುತ್ತಾರೆ. ಅವುಗಳು ದೈಹಿಕ-ಮನೋಭಾನೆಗಳು ಮತ್ತು ಕುಟುಂಬದ ಸಮಸ್ಯೆಗಳು. ಇದು ಬಹಳವಾಯಿತು ನನ್ನ ಕೈಯಿಂದ ಆಗುವುದಿಲ್ಲ ಎಂದು ಅನೇಕ ಸಲ ಹೇಳುತ್ತಾರೆ. ನನ್ನ ಸಮಸ್ಯೆಗಳ ಅರೋಹಣವು ನನ್ನನ್ನು ಸೋಲಿಸುತ್ತವೆ! ಈ ಸಮಸ್ಯೆಗಳನ್ನು ಎದುರಿಸುವದಕ್ಕೆ ಇನ್ನು ಮುಂದೆ ನನಗೆ ಶಕ್ತಿಯಿಲ್ಲ. ನಾನು ಅದನ್ನು ಹೇಗೆ ಮಾಡುತ್ತೇನೆ? ಈ ಹೊತ್ತಿನ ದಿವಸದಲ್ಲಿ ಈ ಅನುಭವ ನಿಮ್ಮದಾಗಿರಬಹುದು?

(3ನೇ ಪುಟಕ್ಕೆ)


**Echo of His Call**



*Christian YouTube Channel!*

**An opportunity to pray with Pr. S. Sam Selva Raj!**

Message & Prayer in 5 minutes!!


**English, Hindi, Tamil & Telugu**

Every day – 5.00 A.M.

**Tamil Sunday Service – 8.30 A.M.**

# ECHO OF HIS CALL - (1969-2019 GOLDEN JUBILEE YEAR)

## from your dearly beloved brother...





**OUR MISSION POLICY**

We should expound and teach the contemporary generation the undiluted teachings of the ancient and early Apostles. It is the need of the hour.

**CHIEF EDITOR**

Pastor Alex Samson Sam, B.Th., M.Div.

**ADMINISTRATION**

Bro. N. Prakasam, M.A., General Manager
Dr. Rabinder Boaz, M.S.
Bro. K. Puratchivendan

**EDITORIAL BOARD**

Sis. Jesy Veena Sam
Sis. Serena Bevin, M.A., M.Phil., B.Ed.
Dr. A. Richard Samuel, M.A., Ph.D.
Rev. Dr. K.R. Rajasekaran

**EDITOR, PUBLISHER & PRINTER**

Pastor S. SAM SELVA RAJ
Echo of His Call Printers
10, Mohammed Abdullah 2nd Street,
Chepauk, Chennai- 600 005, India.
Phone : (+ 91- 44) 2852 8282, 2852 9293, 2854 7766
Cell : (+91) 98410 71852, 95661 31858

**E.mail ID**

sam@echoofhiscall.org
biblecor@yahoo.co.in

**WEBSITES**

www.echoofhiscall.org
www.stpaulsmatriculation.com

**YOUTUBE CHANNEL**

Echo of His Call

**ಚಿಕ್ಕವನಿಂದ ಒಂದು ಕುಲವಾಗುವುದು, ಅಲ್ಪನಿಂದ ಬಲವಾದ ಜನಾಂಗವಾಗುವುದು; ಯೆಹೋವನೆಂಬ ನಾನು ಕ್ಲುಪ್ತಕಾಲದಲ್ಲಿ ಇದನ್ನು ಬಲಬೇಗನೇ ಉಂಟುಮಾಡುವೆನು.**
(ಯೆಶಾಯ 60:22).

ಕರ್ತನಲ್ಲಿ ಪ್ರೀತಿಯುಳ್ಳವರೇ!

ನಮ್ಮ ಕರ್ತನು ಮತ್ತು ರಕ್ಷಕನಾದ ಯೇಸುಕ್ರಿಸ್ತನ ನಾಮದಲ್ಲಿ ನಿಮ್ಮೆಲ್ಲರಿಗೆ ಶುಭಾಶಯಗಳು!

ನೀವೆಲ್ಲರೂ ಚೆನ್ನಾಗಿದ್ದೀರಿ ಎಂದು ನಾವು ನಂಬುತ್ತೇವೆ. ನಾವು ನಿಮಗಾಗಿ ಪ್ರತಿದಿನವು ಪ್ರಾರ್ಥನೆ ಮಾಡುತ್ತೇವೆ. ದೇವರು ನಿಮ್ಮ ಸಂಗಡ ಇದ್ದಹಾಗೆ, ಧೈರ್ಯವುಳ್ಳವರಾಗಿರಿ.

ಕರ್ತನ ಶಕ್ತಿಯುಳ್ಳ ಹಸ್ತವು ನಮ್ಮ ಸೇವೆಗೆ ಸಂಬಂಧಿಸಿದಂತೆ ನಮ್ಮ ಎಲ್ಲಾ ಇತ್ತೀಚಿನ ಪ್ರಯಾಣಗಳಲ್ಲಿ ಮತ್ತು ನಮ್ಮ ಎಲ್ಲಾ ಪ್ರಯತ್ನಗಳು ಮತ್ತು ಚಟುವಟಿಕೆಗಳಲ್ಲಿ ನಮಗೆ ಮಾರ್ಗದರ್ಶನ ನೀಡುತ್ತದೆ.ಕರ್ತನಾದ ಯೇಸುಕ್ರಿಸ್ತನು ಹಗಲಿರಳು ನಿದ್ರಿಸದೆ ಹಾಗೆ ನಮ್ಮ ಸಂಗಡ ಇದ್ದಾನೆ. ಪರಲೋಕದ ತಂದೆಯು ನಿಮ್ಮನ್ನು ಅಧಿಕವಾಗಿ ಆಶೀರ್ವದಿಸಲಿ.

ನಮ್ಮ ಸೇವೆಯಲ್ಲಿ ಅನೇಕ ದೈವಸೇವಕರು ಗಳು ಇದ್ದಾರೆ ಮತ್ತು ಅನೇಕ ಅವರ ಕುಟುಂಬದ ಸದಸ್ಯರು ಅಸ್ವಸ್ಥರಾಗಿದ್ದಾರೆ. ಇದು ದುರದೃಷ್ಟವಶಾತ್ ತಮ್ಮ ಜವಾಬ್ದಾರಿಗಳನ್ನು ಪೂರ್ಣ ಪ್ರಮಾಣದಲ್ಲಿ ಪೂರೈಸಲು ಅಡ್ಡಿಯಾಯಿತು. ಈ ವಿಷಯಕ್ಕಾಗಿ ನಿಮ್ಮಲ್ಲಿ ನಾವು ಪ್ರಾರ್ಥನೆಮಾಡಬೇಕೆಂದು ಪ್ರಾಮಾಣಿಕವಾಗಿ ಬೇಡಿಕೊಳ್ಳುತ್ತೇವೆ. ಇದು ಬಹಳ ತುರ್ತಾಗಿದೆ ಮತ್ತು ಪ್ರಾಮುಖ್ಯವಾಗಿದೆ.

ನಿಮ್ಮಲ್ಲಿ ಅನೇಕರು ನಮ್ಮ ಮಾಸಿಕ ಆತನ **ಕರೆಯ ಪ್ರತಿಧ್ವನಿ** ಪತ್ರಿಕೆಯನ್ನು ಸ್ವೀಕರಿಸುವದಿಲ್ಲ ಎಂಬುದು ನಮ್ಮ ಗಮನಕ್ಕೆ ಬಂದಿದೆ. ಪ್ರತಿತಿಂಗಳು ನಾವು ನಿಮಗೆ ಬಹಳ ಪ್ರಯತ್ನದಿಂದ ಕಳುಹಿಸುತ್ತೇವೆ.

ನಮ್ಮ ಸುದ್ದಿಪತ್ರಗಳು ಹಲವಾರು ಪ್ರತಿಗಳು ವಿವಿಧ ಕಾರಣಗಳ ಅಡಿಯಲ್ಲಿ ನಮಗೆ ಮರಳಿರುವುದರಿಂದ ಏನಾಗುತ್ತದೆ ಎಂಬುದನ್ನು ಕಂಡುಹಿಡಿಯಲು ನಾವು ನಮ್ಮ ಕೈಲಾದಷ್ಟು ಪ್ರಯತ್ನಿಸುತ್ತಿದೇವೆ ಹಾಗೆ, **ಕದ ಮುಚ್ಚಿದೆ, ಬೇರೆಕಡೆಗೆ ಹೋಗಿದ್ದಾರೆ, ಅವಧಿ ಮುಗಿದು ಹೋಗಿದೆ** ಮತ್ತು **ತಿರಸ್ಕಾರ ಮಾಡಿದ್ದಾರೆ.** ನಂತರ ನಾವು ಕಂಡುಹಿಡಿದೆವು ಹೇಳಿದಂತಹ ಕಾರಣಗಳು ಸರಿಯಾಗಿ ಇರುವುದಿಲ್ಲ ಎಂದು. ಪ್ರೀತಿ ಯುಳ್ಳವರೇ, ಯಾವ ಕಾರಣಕ್ಕೂ ನಿಮ್ಮ ಸಂಬಂದ ವನ್ನು ಮುರಿದುಕೊಳ್ಳುವದಕ್ಕೆ ನಮಗೆ ಇಷ್ಟವಿಲ್ಲ. ನೀವು ನಮಗೆ ವಿಶೇಶವಾಗಿದ್ದೀರಿ! ಆದ್ದರಿಂದ ನೀವು ಅಥವಾ ನಿಮ್ಮ ಸ್ನೇಹಿತರು ನಮ್ಮ ಮಾಸಿಕ ಪತ್ರಿಕೆಯನ್ನು ಪಡೆದುಕೊಳ್ಳದೆ ಹೋಗಿದ್ದರೆ, ಆತನ **ಕರೆಯ ಪ್ರತಿಧ್ವ**ನಿಯು ನಿಗದಿ ಪಡಿಸಿದ ದಿನಾಂಕ ದಂದು, ನೀವು ಟಿಲಿಪೋನ್ ಕರೆ, ಎಸ್‌ಎಂಸ್, ವ್ಯಾಟ್ಸ್‌ಪ್, ಪತ್ರಗಳ, ಇ-ಮೇಲ್ ಮೂಲಕ ನಮಗೆ ತಿಳಿಸಿರಿ. ನಿಮ್ಮ ವಿಳಾಸವು ಬದಲಾಗಿದ್ದರೆ, ದಯಮಾಡಿ ನಿಮ್ಮ ಹಳೆಯ ಮತ್ತು ಹೊಸ ವಿಳಾಸವನ್ನು ನಮಗೆ ತಿಳಿಸಿರಿ. ಆತನ ಕರೆಯ ಪತ್ರಿಕೆಯ ಮಾಸಪತ್ರಿಕೆಗಳನ್ನು ಮತ್ತೊಂದು ಸಾರಿ ನಿಮಗೆ ಸರಿಯಾಗಿ ಕಳುಹಿಸುತ್ತೇವೆ.ಹಾಗೆಯೇ ನಿಮ್ಮ ಇ-ಮೇಲ್ ವಿಳಾಸವನ್ನು ನಮಗೆ ಕಳುಹಿಸಿರಿ. ದೇವರು ನಿಮ್ಮನ್ನು ಆಶೀರ್ವದಿಸಲಿ!

ನಾವು ನಮ್ಮ ಮಾಸಿಕ ಪತ್ರಿಕೆಯಾದ ಆತನ **ಕರೆಯ ಪ್ರತಿಧ್ವನಿ** ಕ್ರಮವಾಗಿ ಅಂಚೆ,ಇ-ಮೇಲ್ 16 ಭಾಷೆಗಳಲ್ಲಿ ಈ ಕೆಳಗಿನ ದಿನಾಂಕಗಳಂದು ಕಳುಹಿಸುತ್ತೇವೆ. ನಮ್ಮ ಜೊತೆ ಕೆಲಸದವರ ಕಷ್ಟಕರ ಕೆಲಸದ ಮೂಲಕ.

| | | |
|---|---|---|
| 1. | ತಮಿಳು | : 28 ಹಿಂದಿನ ತಿಂಗಳು |
| 2. | ಇಂಗ್ಲೀಷ್ | : ಪ್ರತಿ ತಿಂಗಳು 2 ತಾರೀಖು |
| 3. | ಸಿನ್ ಹಾಲ | : ಪ್ರತಿತಿಂಗಳು 2 ತಾರೀಖು |
| 4. | ಅಪ್ರಿಖಾನ್ಸ್ | : ಪ್ರತಿತಿಂಗಳು 4 ತಾರೀಖು |

Our Ministries: ECHO OF HIS CALL Monthly Magazines (16 languages) ☼ BIBLECOR - Postal Courses (3 languages) ☼ Media Ministry ☼ Online Courses ☼ Theological Correspondence Courses (2 languages) ☼ Church Planting ☼ Nehemiah Bible Colleges ☼ Gospel Printing Press ☼ Great Commission Partners ☼ St. Paul's Matriculation School ☼ Crusades ☼ Community Development

| | | | |
|---|---|---|---|
| 5. | ಮಲೆಯಾಳಂ | : | ಪ್ರತಿತಿಂಗಳು 4 ತಾರೀಖು |
| 6. | ತೆಲುಗು | : | ಪ್ರತಿತಿಂಗಳು 6 ತಾರೀಖು |
| 7. | ಹಿಂದಿ | : | ಪ್ರತಿತಿಂಗಳು 9 ತಾರೀಖು |
| 8. | ಕನ್ನಡ | : | ಪ್ರತಿತಿಂಗಳು 10 ತಾರೀಖು |
| 9. | ಮರಾಠಿ | : | ಪ್ರತಿತಿಂಗಳು 12 ತಾರೀಖು |
| 10. | ಅಸ್ಸಾಮೀಸ್ | : | ಪ್ರತಿತಿಂಗಳು 12 ತಾರೀಖು |
| 11. | ಬೆಂಗಾಲಿ | : | ಪ್ರತಿತಿಂಗಳು 14 ತಾರೀಖು |
| 12. | ಉರ್ದು | : | ಪ್ರತಿತಿಂಗಳು 14 ತಾರೀಖು |
| 13. | ನೆಪಾಲಿ | : | ಪ್ರತಿತಿಂಗಳು 16 ತಾರೀಖು |
| 14. | ಗುಜರಾತಿ | : | ಪ್ರತಿ ತಿಂಗಳು 16 ತಾರೀಖು |
| 15. | ಒಡಿಯಾ | : | ಪ್ರತಿ ತಿಂಗಳು 18 ತಾರೀಖು |
| 16. | ಪಂಜಾಬಿ | : | ಪ್ರತಿತಿಂಗಳು 20 ತಾರೀಖು |

ನಾವು ಈ ಮಾಸಪತ್ರಿಕೆಗಳನ್ನು ನಮ್ಮ ವೆಬ್‌ಸೈಟ್‌ನಲ್ಲಿ ಆ ನಿರ್ದಿಷ್ಟ ದಿನಾಂಕಗಳಲ್ಲಿ ಅಪ್‌ಲೋಡ್ ಮಾಡುತ್ತೇವೆ. ಆದ್ದರಿಂದ ಈ ಅಂಶವನ್ನು ಕೂಡ ನೀವು ಉಪಯೋಗಿಸ ಬಹುದು. ಈ ಮಾಸಪತ್ರಿಕೆಯನ್ನು ನೀವು ಪಡೆದುಕೊಳ್ಳುವದಕ್ಕೆ 75 ಕೆಲಸಗಾರರನು ಬಹಳ ಕಷ್ಟಪಟ್ಟು ಕೆಲಸ ಮಾಡುತ್ತಾರೆ. ಆತನ **ಕರೆಯ ಪ್ರತಿಧ್ವನಿ**ಯ ಪತ್ರಿಕೆಯು ಮೊದಲು ಅಂಗ್ಲಭಾಷೆಯಲ್ಲಿ ಬರೆಯಲಾಗುತ್ತದೆ ನಂತರ ನಮ್ಮ ಸಹಸಂಪಾದಕರ ಮೂಲಕ 15 ಭಾಷೆಗಳಲ್ಲಿ ಭಾಷಾಂತರವಾಗುತ್ತದೆ. ಆತನ **ಕರೆಯ ಪ್ರತಿಧ್ವನಿ**ಯ ಮಾದರಿಯ ಪ್ರಕಾರ ಟೈಪ್ ಮಾಡಲಾಗುತ್ತದೆ ಮತ್ತು ಪುಟೀಕರಿಸ ಲಾಗಿದೆ.



ಪುಟದ ಸುದ್ದಿಪತ್ರಗಳನ್ನು ನಮ್ಮ ಮುದ್ರಣ ಯಂತ್ರದ ಸಹಾಯದಿಂದ ಮುದ್ರಿಸಲಾಗುತ್ತದೆ, ಕೈಮಡಚಿ, ಪ್ರತ್ಯೇಕಿಸಿ, ರಾಜ್ಯವಾರು, ಬಂಡಲ್ ವಾಹನಗಳಲ್ಲಿ ಲೋಡ್ ಮಾಡಲಾದ ನಿಖರ ದಿನಾಂಕದಂದು ಅಂಚೆ ನಿಯಮಾವಳಿಗಳಿಗೆ ಹಸ್ತಾಂತರಿಸಲಾಗುತ್ತದೆ. ದಯಮಾಡಿ ಅಲೋಚನೆ ಮಾಡಿರಿ ಈ ಸೇವೆಯಲ್ಲಿ 75 ಕೆಲಸಗಾರರು ಒಳ ಗೊಂಡಿದ್ದಾರೆ! ಮಾಸಪತ್ರಿಕೆಯು ಪ್ರಪಂಚಾದ್ಯಂತಹ ಅಂಸಖ್ಯ ಜನರ ಜೀವಿತವನ್ನು ಮುಟ್ಟುವುದರಿಂದ, ಯಾವುದೇ ಭಾಷೆಯ ಭೇದವಿಲ್ಲದೆ, ಸಂಸ್ಕೃತಿ ಮತ್ತು ಈ ಲೋಕದ ಸೈತಾನನು ನಮ್ಮ ಕೆಲಸಗಾರರ ಮೇಲೆ ಕೇಂದ್ರಿಕರಿಸು ತ್ತಾನೆ. ಅವರು ಆತ್ಮೀಕ ಯುದ್ಧವನ್ನು ಎದುರಿಸುವದಕ್ಕೆ ಕಾರಣವಾಗುತ್ತದೆ. ಅವರಿಗಾಗಿ ನೀವು ಪ್ರಾರ್ಥನೆಮಾಡುತ್ತಿರಾ? ಈ ಸೇವೆಯ ನೀವು ಒಂದು ಭಾಗವಾಗಲು ಕೆಲವು ಮಾರ್ಗವನ್ನು ಕಂಡುಕೊಳ್ಳಲು ನಿಮ್ಮ ಹೃದಯದಲ್ಲಿ ದಯೆಯಿಂದ ಆಲೋಚಿಸಿ.

ನಮಗಾಗಿ ಪ್ರಾರ್ಥನೆ ಮಾಡುವ ಪ್ರಾರ್ಥನ ಸಹಭಾಗಿಗಳು ಬೇಕಾಗಿದ್ದಾರೆ. ಗೌರವ ಸಂಯೋಜಕರು ಈ ಸುದ್ದಿಪತ್ರವನ್ನು ತಮ್ಮ ಭಾಷೆಗಳಲ್ಲಿ ಓದಬಹುದು ಮತ್ತು ಪ್ರತಿ ತಿಂಗಳು ಈ ಸುದ್ದಿಪತ್ರಗಳನ್ನು ಸುಧಾರಿಸಲು ನಮಗೆ ಸಲಹೆ ಗಳನ್ನು ನಮಗೆ ಸಲಹೆಗಳು ಮತ್ತು ಆಲೋಚನೆ ಗಳನ್ನು ನೀಡಬಹುದು. ಈ ಪ್ರಕಾಶನದ ಸೇವೆಯನ್ನು ನಾವು ಬಹಳ ಪರಿಣಾಮಕಾರಿಯಾಗಿ ಮಾಡ ಬೇಕೆಂದು ನಾವು ಬಯಸುತ್ತೇವೆ. ನಾವು ನಿಮ್ಮ ಪ್ರತ್ಯುತ್ತರಕ್ಕಾಗಿ ಆಸಕ್ತಿಯಿಂದ ಕಾಯುತ್ತೇವೆ ಮತ್ತು ಸಂಪಾದಕರ ಭಾಗವನ್ನು ತಾಳ್ಮೆಯಿಂದ ಓದಿದಕ್ಕಾಗಿ ಮತ್ತೊಂದು ಸಾರಿ ನಿಮಗೆ ತುಂಬ ಧನ್ಯವಾದಗಳು.

ದೇವರ ಶಾಂತಿಯು ನಿಮ್ಮೊಂದಿಗಿರಲಿ! ಆಮೇನ್.

**ಕ್ರಿಸ್ತ ಯೇಸುವಿನಲ್ಲಿ ನಿಮ್ಮ ಸೇವಕರುಗಳು,**

**ಡಾ. ಎಸ್ ಸ್ಯಾಮ್ ಸೆಲ್ವರಾಜ್ ಮತ್ತು ಆಲೆಕ್ಸೆ ಸ್ಯಾಮುಸನ್ ಸ್ಯಾಮ್**

(+91) 98412 71858 / 98410 71858,
E.mail : sam@echoofhiscall.org

---

*(1ನೇ ಪುಟದಿಂದ)*

ನಮ್ಮ ಸೇವೆಯಲ್ಲಿ ಪ್ರತಿದಿನ ಅತ್ಯಂತ ಕಷ್ಟಕರ ಪರಿಸ್ಥಿತಿಗಳಿಗೆ ಒಳಗಾಗುವ ಸಂತರಿಂದ ಅನೇಕ ಪತ್ರಗಳನ್ನು ಸ್ವೀಕರಿಸುತ್ತೇವೆ. ಕೆಲವು ದಿನಗಳ ಹಿಂದೆ, ಈ ಪತ್ರಗಳನ್ನು ಓದುವುದಕ್ಕೆ ನಾನು ಸುಮಾರು ಅರ್ಧದಿನವನ್ನು ತೆಗೆದುಕೊಂಡೆನು.

ಒಬ್ಬ ದೈವ ಸ್ತ್ರೀಯು ಈ ರೀತಿಯಾಗಿ ತಿಳಿಸಿದಳು; ನಾನು ಈಗ ಮದುವೆಯಾಗಿ 35 ವರ್ಷಗಳು ಮೇಲೆ ಆಯಿತು ನಾನು ಅಜ್ಜಿಯಾಗಿ ದ್ದೇನೆ. ಆದರೆ ಈಗ ನನ್ನ ಕುಟುಂಬವು ನನ್ನ ಗಂಡನಿಂದ ನಾಶವಾಗಿಹೋಗಿದೆ.ಆತನು ದೇವರಿಂದ ಅಭಿಷೇಕ ಹೊಂದಿದಂತಹ ಸೇವಕನಾಗಿ ದ್ದನು ಮತ್ತು ಕರ್ತನಿಂದ ಉಪಯೋಗಿಸಲ್ಪಟ್ಟವನು. ಆತನಲ್ಲಿ ಇದ್ದಂತಹ ಬೆಂಕಿ ಈಗ ಆರಿಹೋಗಿದೆ. ನನಗಾಗಿ ಮತ್ತು ನನ್ನ ಕುಟುಂಬಕ್ಕಾಗಿ ಪ್ರಾರ್ಥಿಸಿರಿ. ಆತನಿಗೆ ನನ್ನ ಮೇಲೆ ಯಾವುದೇ ಪ್ರೀತಿಯಿಲ್ಲ, ನಾನು ಬಹಳ ದುಃಖದಲ್ಲಿ ಇದ್ದೇನೆ.

ಈ ಮಹಿಳೆಯ ಜೀವನದಲ್ಲಿ ಕತ್ತಲೆಯ ಪಲ್ಯ ಅವರಿಸಿದೆ. ಆದ್ಯಾಗೂ ಆಕೆಯು ಆತನನ್ನು ಪ್ರೀತಿಸುತ್ತಾಳೆ ಮತ್ತು ಆತನು ತನ್ನ ಕೆಟ್ಟ ಮಾರ್ಗಗಳಿಂದ ಹೊರಗಡೆ ಬರುವದನ್ನು ಆಕೆಯು ಬಯಸುತ್ತಾಳೆ. ದೇವರಿಗೆ ಅರ್ಹತೆಯುಳ್ಳ ಜೀವಿಸುವದಕ್ಕೆ. ಆದರೆ ಅವಳು ತನ್ನ ಎಲ್ಲಾ ಭಾವನೆಗಳನ್ನು ಬರಿದು ಮಾಡಿದಳು ಮತ್ತು ಅನಾರೋಗ್ಯದ ಮಹಿಳೆಯಾದಳು. ಓ ದೇವರೇ ನನ್ನನ್ನು ಹೀಗೆ ನಾಶ ಮಾಡಬಹುದು ಎಂಬುದಾಗಿ ಆಕೆಯು ಆಶ್ಚರ್ಯಪಡುತ್ತಾಳೆ. ಇನ್ನೂ ನಾನು ಈ ಕಷ್ಟಗಳನ್ನು ಸಹಿಸಿಕೊಳ್ಳುವದಕ್ಕೆ ಆಗುವುದಿಲ್ಲ. ಇನ್ನೂ ನಾನು ಹೇಗೆ ಮುಂದೆ ಹೋಗಲಿ?

ಇನ್ನೊಂದು ಮಹಿಳೆ ತಿಳಿಸುತ್ತಾಳೆ,ನಾನು ಏಳು ವರ್ಷಗಳಿಂದ ಭಯಾನಕ ಕರುಳಿನ ಸಮಸ್ಯೆ ಯೊಂದಿಗೆ ಬದುಕಿದ್ದೇನೆ. ನನ್ನ ಗಂಡನ ಆರೋಗ್ಯವು ಕೂಡ ಬಹಳ ಕೆಟ್ಟದಾಗಿದೆ. ನಮ್ಮ ಹಣಕಾಸಿ ಪರಿಸ್ಥಿತಿಯು ಘೋರಪರಿಸ್ಥಿತಿಯಲ್ಲಿ ಇದೆ. ಆದರೂ ನಾವು ಕ್ಷುಲ್ಲಕ ವಿಷಯಗಳಿಗೆ ಹಣವನ್ನು ಖರ್ಚುಮಾಡುವುದಿಲ್ಲ. ನನ್ನ ತಂದೆಯು 89 ವರ್ಷ ವಯಸ್ಸುವುಳ್ಳನಾಗಿ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾನೆ. ನೀವು ನಮಗಾಗಿ ಪ್ರಾರ್ಥನೆ ಮಾಡಬೇಕೆಂದು ನಿಮ್ಮನ್ನು ಕೇಳಿಕೊಳ್ಳುತ್ತೇನೆ.

ಪ್ರತಿದಿನ ಈ ಮಹಿಳೆಯು ಕಷ್ಟಗಳನ್ನು ಹಾದುಹೋಗುವ ತಂದೆ, ಗಂಡನನ್ನು ನೋಡುತ್ತಾ ಇದ್ದಾಳೆ. ಸಹಿಸಿಕೊಳ್ಳಲಾಗದ ನೋವು ಮತ್ತು ಹಣಕಾಸಿನ ದುಃಸ್ವಪ್ನಗಳು. ಆಕೆಯು ಎಷ್ಟುಸಾರಿ ಅಳುತ್ತಾ ಇರಬಹುದು ನನಗೆ ಆಶ್ಚರ್ಯವಾಗುತ್ತದೆ. ಕರ್ತನೇ ಈ ವೈರಿಗಳು ನನಗೆ ಬಹಳ ಬಲವಾಗಿ ಇದ್ದಾರೆ. ಬಲಹೀನ, ಅಸಹಾಯಕನಾದ ನಾನು ಹೇಗೆ ಸಹಿಸಿಕೊಳ್ಳಲಿ? ನಾವು ಅದನ್ನು ಹೇಗೆ ಮಾಡಲಿದ್ದೇವೆ?

ಒಬ್ಬ ಸಭಾಪಾಲಕನು ಹೀಗೆ ಬರೆದನು,ಕಳೆದ ಜುಲೈನಲ್ಲಿ ನಾನು ನನ್ನ ಪ್ರಾಸ್ಟೇಟ್‌ನಲ್ಲಿ ಅಮೂಲಾಗ್ರ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದೆ ಅದು ಕ್ಯಾನ್ಸರ್‌ನಿಂದ ತುಂಬಿತ್ತು. ವೈದ್ಯರು ಅದರ ಸುತ್ತಲಿನ ಅಂಗಾಂಶ ಗಳನ್ನು ತೆಗೆದು ಜೀವನವನ್ನು ಕಷ್ಟಕರವಾಗಿಸಿದರು. ಈಗ ನನಗೆ ಮಧುಮೇಹ ಮತ್ತು ಹೊಟ್ಟೆ ಹುಣ್ಣು ಆಗಿದೆ. ನನಗಾಗಿ ನೀವು ಪ್ರಾರ್ಥನೆಮಾಡುತ್ತೀರಾ? ಎಂತಹ ದೈತ್ಯ ವೈರಿಗಳನ್ನು ಈ ಮನುಷ್ಯರು ಪ್ರತಿದಿನ ಎದುರಿಸುತ್ತಾ ಇದ್ದಾರೆ! ಅವನ ಕೆಲವು ಕ್ಯಾನ್ಸರ್ ಉಳಿಯಬಹುದೆಂಬ ಭಯದಲ್ಲಿ ಅವನು ವಾಸಿಸುತ್ತಾನೆ. ಆತನು ಮಧುಮೇಹವನ್ನು ಮತ್ತು ಹೊಟ್ಟೆಯ ಹುಣ್ಣಿನ ಸಮಸ್ಯೆಯನ್ನು ಎದುರಿಸುತ್ತಾ ಇದ್ದಾನೆ. ಆತನು ಎಷ್ಟುಸಾರಿ ಕೇಳುತ್ತಾ ಇರಬಹುದೆಂದು ನನಗೆ ಆಶ್ಚರ್ಯವಾಗುತ್ತದೆ. ನಾನು ಇದನ್ನು ಎದುರಿಸುತ್ತಾ ಹೇಗೆ ಮುಂದುವರಿಸಲಿ? ನಾನು ಹೇಗೆ ಮಾಡಲಿ?

ಕರ್ತನ ಒಬ್ಬ ಹಿರಿಯ ಸಹೋದರಿ ಈ ರೀತಿಯಾಗಿ ಬರೆದಳು. ಮಾರ್ಚ್ ಬಂದರೆ ನನಗೆ 81 ವಯಸ್ಸು ಆಗುತ್ತದೆ, ನನಗೆ ಸಂಧಿವಾತ ಮತ್ತು ಮಧುಮೇಹವಿದೆ. ನನ್ನ ನಡುವು ಮತ್ತು ಕಾಲುಗಳು ಬಲಹೀನವಾಗಿವೆ. ನನಗೆ ಬಹಳ ಕಡಿಮೆ ನಡೆಯುವುದಕ್ಕೆ ಆಗುತ್ತದೆ. ಕಾರಣ ನಾನು ಒಬ್ಬಳೇ ಇರುತ್ತೇನೆ, ಮನೆಯ ಕೆಲಸವನ್ನು ನಾನೇ ಮಾಡಿಕೊಳ್ಳಬೇಕು. ನನ್ನ ಹತ್ತಿರ ಬಹಳ ಹಣವಿಲ್ಲ ಅಥವಾ ಸಂಬಂಧಿಕರು ಇಲ್ಲ. ದಯಮಾಡಿ ನನಗಾಗಿ ಪ್ರಾರ್ಥನೆಮಾಡಿರಿ.

ಈ ನೋವಿನಿಂದ ಬಳಲುತ್ತಿರುವ ಮಹಿಳೆ ಯರು ಪ್ರತಿದಿನ ಬೆಳಿಗ್ಗೆ ಎದ್ದೇಳಲು ಕೆಲಸ ಮಾಡುವುದನ್ನು ನಾನು ನೋಡುತ್ತೇನೆ.ಅಡುಗೆ ಮಾಡುವದಕ್ಕೆ ಕಷ್ಟಪಡುತ್ತಾ ಇದ್ದಾಳೆ. ತನ್ನ ಮನೆಯನ್ನು ಕಾಪಾಡಿಕೊಳ್ಳುವದಕ್ಕೆ ಕಷ್ಟಪಡುತ್ತಾ ಇದ್ದಾಳೆ. ನನಗೆ ಯಾರು ಸಹಾಯ ಮಾಡುವುದಿಲ್ಲ, ಅವಳು ಕೆಲವೊಮ್ಮೆ ಆಶ್ಚರ್ಯಪಡುತ್ತಾಳೆ, ನಾನು ಇನ್ನೊಂದು ದಿನವನ್ನು ಹೇಗೆ ಮಾಡಲಿದ್ದೇನೆ? ನಾನು ಮರುದಿನ ಬೆಳಿಗ್ಗೆ ಹಾಸಿಗೆಯಿಂದ ಏಳುವಾಗ ನನಗೆ ಏನಾಗುತ್ತದೆ?

ಇನ್ನೊಬ್ಬ ಸಹೋದರಿ ಈ ರೀತಿಯಾಗಿ ಬರೆದಳು, ಆತನ ಅನ್ನನಾಳದಲ್ಲಿ ಟರ್ಮಿನಲ್ ಕ್ಯಾನ್ಸರ್ ಇದೆ ಎಂದು ನನ್ನ ಗಂಡನಿಂದ ನಾನು ಈಗಷ್ಟೆ ಕೇಳಿದ್ದೇನೆ. ಆತನು ದೈವತ್ವದ ಮನುಷ್ಯನಾಗಿದ್ದಾನೆ ಮತ್ತು ನನ್ನ 14 ವರ್ಷದ ಮಗನಿಗೆ ಅದ್ಭುತವಾದ ತಂದೆಯಾಗಿದ್ದಾನೆ. ನಾನು ಬಲವಾಗಿ ನಿಂತುಕೊಳ್ಳುವದಕ್ಕೆ ಪ್ರಾರ್ಥನೆ ಮಾಡಿರಿ. ಇದರಿಂದ ನನ್ನ ನಂಬಿಕೆಯು ಹೆಚ್ಚಾಗುತ್ತದೆ.

ಈ ರೀತಿಯಾಗಿ ಅನೇಕ ಜನರು ನಮಗೆ ಪತ್ರಗಳನ್ನು ಬರೆದಿದ್ದಾರೆ. ಈ ಬಡ ಮಹಿಳೆಯು ದೊಡ್ಡ ಸಮಸ್ಯೆಗಳನ್ನು ಪ್ರತಿದಿನ ಎದುರಿಸುವದಕ್ಕೆ ಅಳುತ್ತಾ ಇದ್ದಾಳೆ.

ನನ್ನ ಜೀವನದಲ್ಲಿ ಇಂತಹ ಸಮಸ್ಯೆಗಳನ್ನು ಕೇಳಿರಲಿಲ್ಲ. ಸಂಕಷ್ಟಗಳು ಮತ್ತು ಕ್ರೈಸ್ತರ ಮಧ್ಯದಲ್ಲಿ ಇಂತಹ ನೋವುಗಳು. ಮದುವೆಯ ಸಂಘರ್ಷಗಳು, ಹಣಕಾಸಿನ ತೊಂದರೆಗಳು, ದೈಹಿಕ ಸಮಸ್ಯೆಗಳು, ಕೊನೆಯಿಲ್ಲದೆ ನೋವು. ಇದನ್ನು ನಾನು ಹೇಗೆ ಮಾಡಲಿ ಎಂದು ಜನರು ಕೇಳುತ್ತಾ ಇದ್ದಾರೆ? ಈ ಎಲ್ಲಾ ವೈರಿಗಳು ನನಗೆ ಬಹಳ ಶಕ್ತಿಯುಳ್ಳ ವಾಗಿವೆ. ನಾನು ಬಲಹೀನ, ಅಸಹಾಯಕ, ಅವುಗಳಿಗಾಗಿ ಏನಾದರೂ ಮಾಡುವದಕ್ಕೆ ಅಸಕ್ತನಾಗಿದ್ದೇನೆ. ಕರ್ತನೇ ಇದರಿಂದ ನಾನು ಹೇಗೆ ಹೊರಗಡೆ ಬರಲಿ?

ಸತ್ಯವೇನೆಂದರೆ, ಈ ಘೋರವಾದ ಯಾವ ಸಂಗತಿಗಳು ದೇವರಿಗೆ ಅಶ್ಚರ್ಯ ಪಡಿಸುವುದಿಲ್ಲ. ಮಾನವಕುಲಕ್ಕೆ ಸಂಭವಿಸುವ ಪ್ರತಿಯೊಂದು ಭೀಕರ ಸಂಗತಿಯನ್ನು ಆತನು ಮನಗಂಡಿದ್ದಾನೆ. ಈ ಹೊತ್ತು ನಾವು ಎದುರಿಸುವಂತೆ ಎಲ್ಲಾ ಸಮಸ್ಯೆಗಳು, ಸಂಕಷ್ಟಗಳು. ಅವುಗಳನ್ನು ಹೇಗೆ ಎದುರಿಸ ಬೇಕೆಂದು ದೇವರು ನಮಗೆ ತೋರಿಸಲು ಬಯಸುತ್ತಾನೆ ಎಂದು ಸತ್ಯವೇದವು ಹೇಳುತ್ತದೆ.

ಕರ್ತನು ಮೋಶೆಗೆ ಎರಡು ನಿರೀಕ್ಷೆಯ ಮಾತುಗಳನ್ನು ಮಾತನಾಡಿದನು ಅವುಗಳು ಇಂದು ನಮಗೆ ಉದ್ದೇಶಿಸಲಾಗಿದೆ.ನಾವು ಆತನು ಹೇಳಿದ ಹಾಗೆ ಮಾಡಿದರೆ, ನಾವು ನಮ್ಮ ಪರೀಕ್ಷೆಗಳ ಮೂಲಕ ಅದನ್ನು ಸಾಧಿಸುವುದಿಲ್ಲ, ನಮಗೆ ನೀಡಿದ ವಾಗ್ದನಗಳನ್ನು ಪೂರೈಸುವಲ್ಲಿ ದೇವರು ನಂಬಿಗಸ್ತನಾಗಿರುವದನ್ನು ನಾವು ಕಂಡುಕೊಳ್ಳುತ್ತೇವೆ.

### 1. ನಮ್ಮ ಯಾವುದೇ ವೈರಿಗಳಿಗೆ ನಾವು ಭಯ ಪಡಬಾರದೆಂದು ದೇವರು ನಮಗೆ ಅಜ್ಞಾಪಿಸಿದ್ದಾನೆ!

**ಅವರಿಗೆ ಹೆದರಬೇಡಿರಿ?** ಧರ್ಮೋಪದೇಶ ಕಾಂಡ 7:18 ಇಸ್ರಾಯೇಲ್ಯರಿಗೆ, ಅವರು ವಾಗ್ದಾನ ಮಾಡಿದ ಭೂಮಿಯಲ್ಲಿ ಎದುರಿಸಿದ ಬೃಹತ್, ಸುಸಜ್ಜಿತ ಅನ್ಯಜನಾಂಗಗಳನ್ನು ಪ್ರತಿನಿಧಿಸಿದರು. ಈ ಹೊತ್ತು ನಮಗೆ, ಅವರು ಎಲ್ಲಾ ಸಮಸ್ಯೆಗಳು, ತೊಂದರೆ ಪ್ರತಿನಿಧಿಸುತ್ತದೆ ಮತ್ತು ನಾವು ಜೀವನದಲ್ಲಿ ಎದುರಿಸುವ ಅಗಾಧ ಕಷ್ಟಗಳು.

ನಾವು ಯಾಕೆ ಭಯಪಡಬಾರದು, ನೀವು ಕೇಳಬಹುದು? ಇಲ್ಲ ಎಂದು ದೇವರು ಹೇಳುತ್ತಾನೆ! ಯಾವುದೇ ವಿವರಣೆಯ ಅಗತ್ಯವಿಲ್ಲ. ದೇವರು ಎಲ್ಲಾ ಶಕ್ತಿಯುಳ್ಳವನಾಗಿದ್ದಾನೆ, ಎಲ್ಲಾ ಸಂತೃಪ್ತಿ, ನಾವು ಎದುರಿಸುವ ಸೈತಾನನ ಭದ್ರಕೋಟೆಗಳು ಆತನಿಗೆ ಗೊತ್ತಿದೆ. ಆತನಿಗೆ ಎಲ್ಲಾ ಉರುಲು, ಸಮಸ್ಯೆಗಳು ಮತ್ತು ನಮ್ಮ ಮೇಲೆ ಎಸೆಯುವ ಎಲ್ಲಾ ಶೋಧನೆಗಳು. ಅವುಗಳಿಗೆ ನೀವು ಭಯಪಡಬಾರದೆಂದು ದೇವರು ಅಜ್ಞಾಪಿಸಿದ್ದಾನೆ!

ದೇವರು ಈ ಅಜ್ಞೆಯನ್ನು ಅಬ್ರಹಾಮನಿಗೆ ಕೊಟ್ಟನು. ಈ ಮನುಷ್ಯನು ಅನ್ಯದೇಶದಲ್ಲಿ ವಾಸಿಸುತ್ತಾ ಇದ್ದನು. ಬಲವಾದ ರಾಜರುಗಳ ಮಧ್ಯದಲ್ಲಿ. ಆತನು ಎಲ್ಲಿಗೆ ಮುಗಿಯಿಸುತ್ತಾನೆ ಎಂಬುದು ಆತನಿಗೆ ಗೊತ್ತಿರಲಿಲ್ಲ. ಆದ್ಯಾಗ್ಯೂ ಆತನಿಗೆ ದೇವರ ಮೊದಲ ಮಾತು, ಭಯ ಪಡಬೇಡ! **ಈ ಸಂಗತಿಗಳು ನಡೆದ ಮೇಲೆ ಅಬ್ರಾಮನಿಗೆ ದರ್ಶನದಲ್ಲಿ ಯೆಹೋವನ ವಾಕ್ಯವುಂಟಾಯಿತು; ಏನಂದರೆ ಅಬ್ರಾಮನೇ, ಭಯಪಡಬೇಡ, ನಾನು ನಿನಗೆ ಗುರಾಣಿ ಯಾಗಿದ್ದೇನೆ; ನಿನಗೋಸ್ಕರ ಅತ್ಯಧಿಕ ಬಹುಮಾನವು ಇಟ್ಟದೆ ಎಂಬುದೇ.** (ಆದಿಕಾಂಡ 15:1).

ಈ ವಾಕ್ಯಭಾಗದ ಕೊನೆಯ ಮಾತಿನ ಅರ್ಥ, ನಿನ್ನ ಸುತ್ತ ನಾನು ಗೋಡೆಯಾಗಿದ್ದೇನೆ, ನಿನ್ನ ಸಂರಕ್ಷಕನು, ನಿನ್ನ ರಕ್ಷಕನು. ಮೂಲಭೂತವಾಗಿ, ದೇವರು ಅಬ್ರಾಮಾನಿಗೆ ಈ ರೀತಿಯಾಗಿ ಹೇಳುತ್ತಾನೆ. ನೀನು ಸಂಕಷ್ಟಗಳನ್ನು ಎದುರಿಸುತ್ತೀ, ಆದರೆ ಅವೆಲ್ಲವುಗಳಿಂದ ನಾನು ನಿನ್ನನ್ನು ಸಂರಕ್ಷಿಸುತ್ತೇನೆ. ಅಬ್ರಾಮನು ದೇವರ ವಾಕ್ಯಕ್ಕೆ ವಿಧೇಯನಾಗಿ ಪ್ರತ್ಯು ್ತರಿಸಿದನು. **ಅಬ್ರಾಮನು ಯೆಹೋವನನ್ನು ನಂಬಿದನು; ಯೆಹೋವನು ಅವನ ನಂಬಿಕೆಯನ್ನು ಅವನ ಲೆಕಕ್ಕೆ ನೀತಿಯೆಂದು ಎಣಿಸಿದನು** (ಆದಿಕಾಂಡ 15:6)

ಇದೇ ಮಾತು ಅಬ್ರಾಮನ ಮಗನಾದ ಇಸಾಕನಿಗೆ ಬಂತು. ಅವನು ಕೂಡ ವೈರತ್ವದ ವಾತವರಣದಲ್ಲಿ ಜೀವಿಸಿದನು. ಆತನನ್ನು ದ್ವೇಷಮಾಡುವ ಪಿಲಿಷ್ಟಿಯರ ಮಧ್ಯದಲ್ಲಿ ಅವನಿಗೆ ಕಿರುಳು ನೀಡಿದರು ಮತ್ತು ಅವನನ್ನು ತಮ್ಮ ಭೂಮಿಯಿಂದ ಹೊರಗಿಡಬೇಕೆಂದು ಬಯಸಿದರು. ಸತ್ಯವೇದವು ಹೇಳುತ್ತದೆ, ಇಸಾಕನು ನೀರಿಗಾಗಿ ಬಾವಿಯನ್ನು ಯಾವಗಲೂ ತೋಡುತ್ತಿದ್ದನು. **ಫಿಲಿಷ್ಟಿಯರು ಮತ್ತೆ**

(6ನೇ ಪುಟಕ್ಕೆ)


RESIDENTIAL BIBLE COURSE
NEHEMIAH BIBLE COLLEGE, Chennai.

ECHO OF HIS CALL 1969-2019 REACHING NATIONS

Medium : Hindi

Registered Candidate for Membership
Asia Theological Association (ATA)

Regd. Candidate for Membership ATA NEHEMIAH BIBLE COLLEGE CHENNAI ECHO OF HIS CALL Estd. 1969

Recognised by International Christian Leaders & Senior Pastors for the past 54 years

Diploma in Ministry : One year
Diploma in Theology : Two years
Bachelor of Theology : Three years

Qualification : 10th Standard & above
Rush for Admission!

Contact : The Chairman, Nehemiah Bible College.
10, MOHAMMED ABDULLAH 2ND STREET, CHEPAUK, CHENNAI - 600 005, INDIA.
Phone : (+91-44) 2852 8282, Cell : (+91) 98410 71852 / 95661 31858
E.mail : sam@echoofhiscall.org / Website : www.echoofhiscall.org
✶ ONLINE CLASSES ARE AVAILABLE ✶

GREAT COMMISSION PARTNERS

ECHO OF HIS CALL MINISTRIES
SINCE 1969

# ಪರಮಾದೇಶದಲ್ಲಿ ಪಾಲುಗಾರರು

ಹಂಚುವುದು (ಗಲಾತ್ಯ.6:2), ಪ್ರೋತ್ಸಾಹಿಸುವುದು (ರೋಮಾಪುರ.12:13 )
ತ್ವರಿತಗೊಳಿಸುವುದು ( II ತಿಮೋಥಿ. 1:6 )



From 2023 September 19 To October 18

(ಈ ಹಾಳೆಯನ್ನು ಹರಿದು ನಿಮ್ಮ ಸತ್ಯವೇದದೊಳಗಿಟ್ಟು ಇವುಗಳಿಗಾಗಿ ಪ್ರಾರ್ಥಿಸಿರಿ)

## ಸ್ತೋತ್ರಕ್ಕಾಗಿ ಅಂಶಗಳು

ಸೆಪ್ಟಂಬರ್ 19 : ನಮ್ಮ ಆತನ ಕರೆಯ ಪ್ರತಿಧ್ವನಿಯ ಸೇವೆಗಳು 55 ವರ್ಷದ ಸಂಭ್ರಮಕ್ಕಾಗಿ ದೇವರಿಗೆ ಸ್ತೋತ್ರವಾಗಲಿ.

ಸೆಪ್ಟಂಬರ್ 20 : ನಮ್ಮ ಮುದ್ರಣಾಲಯದಲ್ಲಿ ನಮ್ಮ ಪತ್ರಿಕೆಯನ್ನು 16 ಭಾಷೆಗಳಲ್ಲಿ ಮುದ್ರಿಸಲು ಮತ್ತು ಪ್ರಕಟಿಸಲು ಮತ್ತು ಸೇವೆಯ ಕ್ಷೇತ್ರಗಳಿಗೆ ಕಳುಹಿಸಲು ನಮಗೆ ಅನುವು ಮಾಡಿಕೊಂಡಿದ್ದಾನೆ.

ಸೆಪ್ಟಂಬರ್ 21 : ಆತನ ದಯೆಯು ನಮ್ಮ ಪ್ರಾರ್ಥನ ಸಹಭಾಗಿಗಳು, ಚಂದ ಸಹಭಾಗಿಗಳು, ನಂಬಿಕೆಯ ಸಹಭಾಗಿಗಳು, ಜೀವಂತ ಸಹಭಾಗಿಗಳು ಮತ್ತು ದೊಡ್ಡ ಆಜ್ಞೆಯ ಸಹಭಾಗಿಗಳು ಮತ್ತು ಅವರ ಕುಟುಂಬಗಳಿಗಾಗಿ.

ಸೆಪ್ಟಂಬರ್ 22 : ನಮ್ಮ ಆತನ ಕರೆಯ ಪ್ರತಿಧ್ವನಿಯ ಸೇವೆಯ ಎಲ್ಲಾ ಸಿಬ್ಬಂದಿವರ್ಗದವರು ಮತ್ತು ಕುಟುಂಬಗಳನ್ನು ಸಂರಕ್ಷಿಸಿದಕ್ಕಾಗಿ ದೇವರಿಗೆ ಸ್ತೋತ್ರವಾಗಲಿ.

ಸೆಪ್ಟಂಬರ್ 23 : ಆತನ ಕರೆಯ ಪ್ರತಿಧ್ವನಿಯ ನಮ್ಮ ಮಾಧ್ಯಮದ ಸೇವೆಯಾದ ಯೂಟ್ಯೂಬ್ ಬರಲಿರುವ 5 ನಿಮಿಷ ಸಂದೇಶಗಳ ಸಾಕ್ಷಿಗಾಗಿ ದೇವರಿಗೆ ಸ್ತೋತ್ರವಾಗಲಿ.

ಸೆಪ್ಟಂಬರ್ 24 : ನಮ್ಮ ಸಂತ ಪೌಲ ಮೇಟ್ರಿಕ್ಯುಲಷನ್ ಶಾಲೆ, ನೆಹಮೀಯ ಸತ್ಯವೇದ ಕಾಲೇಜು ಮತ್ತು ದೂರಶಿಕ್ಷಣ ಕೋರ್ಸ್‍ಗಳ ಮೇಲೆ ಆತನ ಆಶೀರ್ವಾದಕ್ಕಾಗಿ ದೇವರಿಗೆ ಸ್ತೋತ್ರವಾಗಲಿ.

ಸೆಪ್ಟಂಬರ್ 25 : ನಮ್ಮ ಆತನ ಕರೆಯ ಪ್ರತಿಧ್ವನಿಯ ಮಾಸಪತ್ರಿಕೆಯ ಸಂಯೋಜಕರ ಸಮರ್ಪಣೆಗಾಗಿ ಆತನಿಗೆ ಸ್ತೋತ್ರವಾಗಲಿ.

ಸೆಪ್ಟಂಬರ್ 26 : ಸೇವಾಕ್ಷೇತ್ರಗಳಲ್ಲಿರುವ ಸಮರ್ಪಣೆಯ ಸೇವಕರಿಗಳಿಗಾಗಿ ದೇವರಿಗೆ ಸ್ತೋತ್ರವಾಗಲಿ.

ಸೆಪ್ಟಂಬರ್ 27 : ನಮ್ಮ ಸುವಾರ್ತೆ ಮುದ್ರಣಾಲಯ ಅದರ ಶಸಕ್ತ ಕೆಲಸಗಾರರಿಂದ ನಿರಂತರವಾಗಿ ಕಾರ್ಯನಿರ್ವಹಿಸುತ್ತಾ ಇದೆ.

ಸೆಪ್ಟಂಬರ್ 28 : ನಮ್ಮ ವಸತಿ ಮತ್ತು ಸಾಯಂಕಾಲದ ನೆಹಮೀಯ ಸತ್ಯವೇದ ಕಾಲೇಜಿಗೆ ಹೊಸ ವಿದ್ಯಾರ್ಥಿಗಳನ್ನು ಒದಗಿಸಿದಕ್ಕಾಗಿ ದೇವರಿಗೆ ಸ್ತೋತ್ರವಾಗಲಿ.

ಸೆಪ್ಟಂಬರ್ 29 : ನಮ್ಮ ಸತ್ಯವೇದ ದೂರ ಶಿಕ್ಷಣ ಕೋರ್ಸ್‍ಗಳು ದೈವಶಾಸ್ತ್ರ ಕೋರ್ಸ್‍ಗಳು ಬೆಳೆಯುತ್ತಾ ಇವೆ.

ಸೆಪ್ಟಂಬರ್ 30 : ನಮ್ಮ ವಸತಿ ನೆಹಮೀಯ ಸತ್ಯವೇದ ಕಾಲೇಜ್ ವೆಲಿಭೇರಿಗೆ ಮೆಟ್ರೋ ನೀರು ಮತ್ತು ಒಳಚರಂಡಿ ಸಂಪರ್ಕವನ್ನುಪಡೆಯಲು ನಮಗೆ ಅನುವು ಮಾಡಿಕೊಟ್ಟಿದ್ದಾನೆ.

ಅಕ್ಟೋಬರ್ 01 : ನಮ್ಮ ಆತನ ಕರೆಯ ಪ್ರತಿಧ್ವನಿಯ ಪತ್ರಿಕಾ ಸೇವೆಗೆ ಸಹಾಯ ಮಾಡುವ ಸಮರ್ಪಣೆಯುಳ್ಳ ಸಹ ಸಂಪಾದಕರುಗಳಿಗಾಗಿ ದೇವರಿಗೆ ಸ್ತೋತ್ರವಾಗಲಿ.

ಅಕ್ಟೋಬರ್ 02 : ನಮ್ಮ ಮುಖ್ಯ ಮತ್ತು ಶಾಖ ಸಭೆಗಳ ಭಾನುವಾರ ಆರಾಧನೆಗಳಲ್ಲಿ ಬಲವಾದ ದೇವರ ವಾಕ್ಯಕ್ಕಾಗಿ.

ಅಕ್ಟೋಬರ್ 03 : ಹಿರಿಯ ಸಭಾಪಾಲಕರ ಮತ್ತು ಬಹುವಿಧದ ಸೇವೆಗಳ ಮೂಲಕ ಸುವಾರ್ತೆಯನ್ನು ಪ್ರಸಾರ ಮಾಡುವ ಅವರ ಸಮರ್ಪಣೆಗಾಗಿ.

## ಪ್ರಾರ್ಥನೆಗಾಗಿ ಅಂಶಗಳು

ಅಕ್ಟೋಬರ್ 04 : ಭಾರತ ದೇಶದ ತಲುಪದೇ ಇರುವ ಪ್ರದೇಶಗಳಿಗೆ ಸುವಾರ್ತೆಯನ್ನು ಸಾರುವದಕ್ಕೆ ಶಕ್ತಿಯನ್ನು ಕೊಡುವಂತೆ.

ಅಕ್ಟೋಬರ್ 05 : ನಮ್ಮ ಹಿರಿಯ ಸಭಾ ಪಾಲಕರಾದ ಸ್ಯಾಮ್ ಸೆಲ್ವರಾಜ್ ಸಂರಕ್ಷಣೆ ಮತ್ತು ಅವರ ಕುಟುಂಬದವರನ್ನು ಎಲ್ಲಾ ಕೆಟ್ಟ ಸನ್ನಿವೇಶ ಗಳಿಂದ ಕಾಪಾಡುವಂತೆ.

ಅಕ್ಟೋಬರ್ 06 : ನಮ್ಮ ಕಛೇರಿ ಸಿಬ್ಬಂದಿ ವರ್ಗದವರು ಮತ್ತು ಮುದ್ರಣಾಲಯದ ಸಿಬ್ಬಂದಿ ವರ್ಗದವರ ಒಳ್ಳೆಯ ಆರೋಗ್ಯಕ್ಕಾಗಿ.

ಅಕ್ಟೋಬರ್ 07 : ನಮ್ಮ ಸಾಯಂಕಾಲ ಮತ್ತು ವಸತಿಯ ನೆಹಮೀಯ ಸತ್ಯವೇದ ಕಾಲೇಜಿನ ಸಂರಕ್ಷಣೆಗಾಗಿ.

ಅಕ್ಟೋಬರ್ 08 : ದೇವರು ನಮ್ಮ ಈ ತಿಂಗಳ ಎಲ್ಲಾ ಅಗತ್ಯತೆಗಳನ್ನು ಪೂರೈಸುವಂತೆ.

ಅಕ್ಟೋಬರ್ 09 : ನಮ್ಮ ಸೇವೆಯು ವಿಸ್ತರಣೆಯಾಗುವಂತೆ ಮತ್ತು ಪ್ರಪಂಚದ್ಯಾಂತಹ ಸುವಾರ್ತೆಯು ಸಾರುವಂತೆ.

ಅಕ್ಟೋಬರ್ 10 : ನಮ್ಮ ಹಿರಿಯ ಸಭಾ ಪಾಲಕರ ಆತ್ಮಚರಿತ್ರೆಯು ಸಫಲವಾಗುವಂತೆ.

ಅಕ್ಟೋಬರ್ 11 : ಪ್ರಪಂಚದಲ್ಲಿ ಶಾಂತಿ ನೆಲೆಸುವಂತೆ.

ಅಕ್ಟೋಬರ್ 12 : ಪ್ರಪಂಚದಲ್ಲಿರುವ ಎಲ್ಲಾ ಮಿಶನರಿಗಳ ದೈವತ್ವದ ಸಂರಕ್ಷಣೆಗಾಗಿ.

ಅಕ್ಟೋಬರ್ 13 : ಆತನ ಕರುಣೆ ಮತ್ತು ಕೃಪೆಯು ಮಣಿಪುರ ರಾಜ್ಯದ ಮೇಲೆ ಸುರಿಯಲು ಮತ್ತು ಮೇಟಿ ಮತ್ತು ಕುಕಿ ಬುಡಕಟ್ಟು ಸಮುದಾಯಗಳಲ್ಲಿ ಶಾಂತಿಯನ್ನು ಹೊಂದಲು.

ಅಕ್ಟೋಬರ್ 14 : ನಮ್ಮ ಇಂಗ್ಲೀಷ್ ಸಹ ಸಂಪಾದಕರಾದ ಡಾ. ರಿಚರ್ಡ್ ಸ್ಯಾಮುವೇಲ್ ಮತ್ತು ಶ್ರೀಮತಿ ಸುವಾರ್ತ, ನಮ್ಮ ಮರಾಠಿ ಸಹ ಸಂಪಾದಕರಾದ ಸಹೋ. ಶಶಿಕಾಂತ ತಿವಾರಿರವರ ಹೆಂಡತಿಯು ಬೇಗನೆ ಗುಣಮುಖರಾಗುವಂತೆ.

ಅಕ್ಟೋಬರ್ 15 : ಪ್ರಪಂಚದ ವಿವಿಧ ಭಾಗಗಳಲ್ಲಿ ಆರ್ಥಿಕ ಹಿಂಜರಿತವು ಅಂತ್ಯಗೊಳ್ಳುವಂತೆ.

ಅಕ್ಟೋಬರ್ 16 : ನೈಸರ್ಗಿಕ ವಿಕೋಪಗಳಿಂದ ಎಲ್ಲಾ ಜನರು ದೈವತ್ವದ ಸಂರಕ್ಷಣೆಯನ್ನು ಹೊಂದುವಂತೆ.

ಅಕ್ಟೋಬರ್ 17 : ಪ್ರಂಪಚದ ಎಲ್ಲಾ ದೇಶಗಳಲ್ಲಿ ಭಯವುಳ್ಳ ನಾಯಕರುಗಳು ಆಗುವಂತೆ.

ಅಕ್ಟೋಬರ್ 18 : ದೀನದಲಿತ ಜನರ ಆರ್ಥಿಕ ಉನ್ನತಿಗಾಗಿ.

*(4ನೇ ಪುಟದಿಂದ)*

**ಅದನ್ನು ಮುಚ್ಚುತ್ತಿದ್ದರು. ಅವನ ತಂದೆಯಾದ ಅಬ್ರಹಾಮನ ಸೇವಕರು ಅಬ್ರಹಾಮನ ಕಾಲದಲ್ಲೇ ತೋಡಿದ್ದ ಬಾವಿಗಳನ್ನು ಫಿಲಿಷ್ಟಿಯರು ಮಣ್ಣು ಹಾಕಿ ಮುಚ್ಚಿದರು.** (ಆದಿಕಾಂಡ 26:15).

ಎಲ್ಲಿಲಿ ಇಸಾಕನು ಹೋದನು, ಅತನು ಅದೇ ಸಮಸ್ಯೆಯನ್ನು ಎದುರಿಸಿದನು. ಆತನು ಒಂದು ಬಾವಿಗೆ ಏಸೆಕ್ ಎಂದು ಕರೆದನು ಅಂದರೆ ಜಗಳ ಎಂದು ಅರ್ಥ. ಸ್ಪಷ್ಟವಾಗಿ, ಇಸಾಕನು ಏನು ಅನಿಸಲಿಲ್ಲ ಅದರೆ ಅವನ ಜೀವನದಲ್ಲಿ ವಿವಾದವಿತ್ತು. ಅವನು ಈ ರೀತಿಯಾಗಿ ಅಲೋಚನೆ ಮಾಡಿರಬಹುದು. ನಾನು ಹೇಗೆ ನನ್ನ ಕುಟುಂಬವನ್ನು ಉಣಿಸಬಡಿಲಿ ಮತ್ತು ನನ್ನ ಹಿಂಡಿಗೆ ನೀರನ್ನು ಕುಡಿಸಲಿ? ಫಿಲಿಷ್ಟಿಯರು ನಮ್ಮನ್ನು ಯಾವಾಗ ಬೇಕಾದರೂ ಲೂಟಿ ಮಾಡಬಹುದು ನಾನು ನ್ನ ಮಕ್ಕಳನ್ನು ನಿರ್ಭಯವಾಗಿ ಬೆಳೆಸುವುದು ಹೇಗೆ? ದೇವರೆ, ನನ್ನನ್ನು ಯಾಕೆ ಇಲ್ಲಿ ಇಟ್ಟಿದ್ದೀಯಾ? ನಾನು ಹೇಗೆ ಮಾಡಬೇಕು?

ಈ ತರಹದ ಅನುಮಾನದ ಮೋಡವು ಇಸಾಕನಲ್ಲಿ ಬೆಳೆಯುತ್ತಿರುವಾಗ, ಅಬ್ರಹಾಮನು ಹೇಳಿದ ಮಾತನ್ನು ದೇವರು ಇಸಾಕನಿಗೆ ಹೇಳಿದನು, ಆ ರಾತ್ರಿ ಯೆಹೋವನು **ಅವನಿಗೆ ಕಾಣಿಸಿಕೊಂಡು ನಾನು ನಿನ್ನ ತಂದೆಯಾದ ಅಬ್ರಹಾಮನ ದೇವರು; ನೀನು ಭಯಪಡಬೇಡ; ನಾನು ನಿನ್ನ ಬಳಿಯಲ್ಲಿದ್ದೇನೆ; ನನ್ನ ಸೇವಕನಾದ ಅಬ್ರಹಾಮನ ನಿಮಿತ್ತ ನಿನ್ನನ್ನು ಆಶೀರ್ವದಿಸಿ ನಿನ್ನ ಸಂತತಿಯನ್ನು ಹೆಚ್ಚಿಸುವೆನು.** ಆದಿಕಾಂಡ 26:24.

ಈ ಹೊತ್ತು ಇಸಾಕನ ಹಾಗೆ, ನಾವು ಅಬ್ರಹಾಮನು ಮಕ್ಕಳಾಗಿದ್ದೇವೆ. ದೇವರು ಅಬ್ರಹಾಮನಿಗೆ ಮತ್ತು ಆತನ ಸಂತತಿಗೆ ಮಾಡಿದ ಅದೇ ವಾಗ್ದಾನವನ್ನು ನಮಗೆ ಮಾಡುತ್ತಾನೆ. **ನೀವು ಕ್ರಿಸ್ತನವರಾಗಿದ್ದರೆ ಅಬ್ರಹಾಮನ ಸಂತತಿ ಯವರೂ ವಾಗ್ದಾನಕ್ಕನುಸಾರವಾಗಿ ಬಾಧ್ಯರೂ ಆಗಿದ್ದೀರಿ.** ಗಲಾತ್ಯ 3:29. ಅಬ್ರಹಾಮನಿಗೆ ಗುರಾಣಿಯಾಗಿದ್ದ ದೇವರನ್ನು ನಾವು ಕೂಡ ಸೇವಿಸುತ್ತಾ ಇದ್ದೇವೆ. ಆತನು ನಮ್ಮ ಸಂಗಡ ಸರ್ವಶಕ್ತನಾಗಿ ಇದ್ದಾನೆ!

ನಮ್ಮ ಪರಲೋಕದ ತಂದೆಯು ನಮ್ಮ ಜೀವಿತದ ಪ್ರತಿಯೊಂದು ಹೆಜ್ಜೆಗಳನ್ನು ಗಮನಿಸುತ್ತಾನೆ. ನಮ್ಮ ಎಲ್ಲಾ ಬಿಕ್ಕಟ್ಟುಗಳು ಮತ್ತು ತೊಂದರೆಗಳ ನಡುವೆಯೂ, ಆತನು ನಮಗೆ ತನ್ನ ವಾಕ್ಯದಲ್ಲಿ ಮತ್ತೆ ಮತ್ತೆ ಅಜ್ಞಾಪಿಸುತ್ತಾನೆ: ಭಯಪಡಬೇಡ! ನಮ್ಮ ಸಮಸ್ಯೆಗಳು ನಮ್ಮನ್ನು ಕೆಳಗಿಳಿಸಿ ನಾಶಮಾಡುತ್ತೇವೆ ಎಂದು ನಾವು ನಂಬಬಾರದರು ಯಾಕೆಂದರೆ ಆತನು ನಮ್ಮ ಗುರಾಣಿ ಎಂದು ನಾವು ತಿಳಿದುಕೊಳ್ಳಬೇಕು.

**ಇಸ್ರಾಯೇಲ್ಯರೇ, ನೀವು ಎಷ್ಟೋ ಧನ್ಯರು; ನಿಮ್ಮಷ್ಟು ಭಾಗ್ಯವಂತರು ಯಾರಿದ್ದಾರೆ? ನೀವು ಯೆಹೋವನು ಅನುಗ್ರಹದಿಂದ ಜಯವನ್ನು ಹೊಂದಿದವರು. ಆತನೇ ನಿಮ್ಮನ್ನು ಕಾಯುವ ಡಾಲೂ ನಿಮ್ಮ ಗೌರವವನ್ನು ಕಾಪಾಡುವ ಕತ್ತಿಯೂ ಆಗಿದ್ದಾನೆ. ಆದ್ದರಿಂದ ನಿಮ್ಮ ಶತ್ರುಗಳು ನಿಮ್ಮ ಮುಂದೆ ಮುದುರಿಕೊಳ್ಳುತ್ತಾರೆ; ನೀವೋ ಅವರಿಗಿದ್ದ ಎತ್ತರವಾದ ಸೀಮೆಯಲ್ಲಿ ಜಯಶಾಲಿಗಳಾಗಿ ಸಂಚರಿಸುತ್ತೀರಿ.** ಧರ್ಮೋಪದೇಶಕಾಂಡ 33:29. ದೇವರು ನಮಗೆ ಹೇಳುತ್ತಾನೆ ಇದ್ದಾನೆ, ನಾನು ನಿಮ್ಮನ್ನು ಮರೆತಿದ್ದೇನೆ ಎಂಬುದು ಸುಳ್ಳಾಗಿದೆ! ನಾನು ನಿಮ್ಮನ್ನು ಮೇಲೆ ಹುಚ್ಚಾಗಿದ್ದೇನೆ ಮತ್ತು ನಿಮ್ಮ ಶತ್ರುಗಳ ವಿರುದ್ದ ನಿಮ್ಮನ್ನು ರಕ್ಷಿಸಿಕೊಳ್ಳಲು ನಿಮ್ಮನ್ನು ಬಿಟ್ಟಿದ್ದೇನೆ ಎಂಬುದು ಸುಳ್ಳು. ಇವೆಲ್ಲವುಗಳು ಸೈತಾನನ ಸುಳ್ಳುಗಳು ಅಗಿವೆ!

**ನಾನು ಪಾಪದೊಂದಿಗೆ ಹೋರಾಡುವ ಎಲ್ಲ ಕ್ರೈಸ್ತರನ್ನು ಉದ್ದೇಶಿಸಿ ಮಾತನಾಡಲು ಬಯಸುತ್ತೇನೆ!**

ಕಾಮ ಅಥವಾ ಅಭ್ಯಾಸದ ಮೇಲೆ ದುಃಖದಿಂದ ನೀವು ಪ್ರತಿದಿನ ಎಚ್ಚರ ಗೊಳ್ಳುತ್ತೀರಾ? ಈ ಭಯಾನಕ ವಿಷಯವು ನನ್ನಲ್ಲಿ ಇನ್ನೂ ಜೀವಂತವಾಗಿದೆ ಎಂದು ಯೋಚಿಸುತ್ತಾ ನೀವು ಹಿಂಸೆಯಲ್ಲಿ ಬದುಕುತ್ತೀರಾ?

ನಿಮ್ಮ ಹೃದಯಗಳಲ್ಲಿ ಉಳಿದಿರುವ ಎಲ್ಲಾ ಪಾಪವು ದೇವರಿಗೆ ಗೊತ್ತಿದೆ. ಆತನಿಗೆ ಗೊತ್ತು ನೀವು ಹೇಗೆ ಅದನ್ನು ದ್ವೇಷಮಾಡುತ್ತೀರಿ ಮತ್ತು ಅದಕ್ಕಾಗಿ ಗೋಳಾಡಿದ್ದೀರಿ. ಆತನು ಈ ಮಾತುಗಳನ್ನು ನೀವು ಕೇಳಬೇಕೆಂದು ಆತನು ಬಯಸುತ್ತಾನೆ. ಭಯಪಡಬೇಡ! ನಾನು ನಿನ್ನ ಗುರಾಣಿಯಾಗಿದ್ದೇನೆ, ನಿನ್ನನ್ನು ರಕ್ಷಿಸುವವನು, ನಿನ್ನ ರಕ್ಷಣೆ, ನಿನ್ನ ಎಲ್ಲಾ ವಿರೋಧಿಗಳ ಪರಿಶುದ್ದ ಕತ್ತಿಯಾಗಿದ್ದೇನೆ. ನಿನ್ನನ್ನು ಶೋಧನೆಗಳಿಂದ ಹೇಗೆ ಹೊರಗಡೆ ತರಬೇಕೆಂದು ನನಗೆ ಗೊತ್ತು. ನೀನು ಹೇಗೆ ಯುದ್ದ ಮಾಡಬೇಕೆಂದು ನಾನು ನಿನಗೆ ಕಲಿಸುತ್ತೇನೆ!

ದಾವಿದನು ಇದು ಗೊತ್ತಿತ್ತು, ಅದಕ್ಕಾಗಿ ಈ ರೀತಿಯಾಗಿ ಹೇಳಲು ಸಾಧ್ಯವಾಯಿತು. **ನಾನು ಕೇಡಿಗೆ ಹೆದರೇನು** ಕೀರ್ತನೆ 23:4 ನಾನು ಭಯಪಟ್ಟರೆ ಸೈತಾನನು ಜಯಿಸುವನೆಂದು ಅವನಿಗೆ ಗೊತ್ತಿತ್ತು.

ಪ್ರಿಯರೇ, ಸೈತಾನನು ನಿಮ್ಮ ವಿರುದ್ದ ಕೆಲಸಮಾಡುವ ವಿಧಾನವಾಗಿದೆ. ಆತನು ನಿಮ್ಮ ಪಾಪಕ್ಕೆ ಭಯಪಡಬೇಕೆಂದು ಬಯಸುತ್ತೇನೆ. ಭಯಪಟ್ಟರೆ ನೀವು ಎಂದಿಗೂ ವಿಮೋಚನೆ ಹೊಂದುವುದಿಲ್ಲ. ಎಂದಿಗೂ ಸ್ವತಂತ್ರರಾಗುವುದಿಲ್ಲ. ಆದರೆ ದೇವರು ನೋವು ಹೊಂದಿದ ಸಂತರಿಗೆ, ದುಃಖದಲ್ಲಿರುವವರಿಗೆ ಭಯಪಡಬೇಡ! ನಿನ್ನ ಎಲ್ಲಾ ಸಮಸ್ಯೆಗಳು ನನಗೆ ಗೊತ್ತಿದೆ ಮತ್ತು ನಾನು ನೋಡಿದ್ದೇನೆ. ನಿನ್ನನ್ನು ನಾಶಮಾಡುವದಕ್ಕೆ ನಾನು ಸೈತಾನನಿಗೆ ಅಪ್ಪಣೆಕೊಡುವುದಿಲ್ಲ!

ನೀವು ಕೇಳಬಹುದು, ಆದರೆ ನಾನು ಏನು ಮಾಡಬೇಕು? ನಾನು ಹೇಗೆ ಇವೆಲ್ಲವುಗಳಿಂದ ಕರ್ತನ ಶಾಂತಿಯನ್ನು ಹೊಂದಿಕೊಳ್ಳಲಿ?

ಇಸ್ರಾಯೇಲ್ಯರಿಗೆ ಮತ್ತು ಮೋಶೆಗೆ ದೇವರ ವಾಕ್ಯದಲ್ಲಿ ಸಿಕ್ಕಿತು. ಅವರ ಮುಂದೆ ಸಮುದ್ರವು, ಅವರ ಹಿಂದೆ ವೈರಿಗಳು ಅವರು ತಿರುಗುವುದಕ್ಕೆ ಯಾವುದೇ ಸ್ಥಳವಿರಲಿಲ್ಲ. ದೇವರು ಅವರಿಗೆ ಅಜ್ಞಾಪಿಸಿದನು, ಆದರೆ ಮೋಶೆ ಆ ಜನರಿಗೆ-ನೀವು ಅಂಜಬೇಡಿರಿ; **ಸುಮ್ಮನೆ ನಿಂತುಕೊಂಡಿದ್ದು ಯೆಹೋವನು ಈ ಹೊತ್ತು ನಿಮ್ಮನ್ನು ರಕ್ಷಿಸುವ ರೀತಿಯನ್ನು ನೋಡಿರಿ. ನೀವು ಈ ಹೊತ್ತು ನೋಡುವ ಐಗುಪ್ತರನ್ನು ಇನ್ನು ಮುಂದೆ ಎಂದಿಗೂ**


NEHEMIAH BIBLE
EVENING COLLEGE

Chepauk & Santhoshapuram, Chennai.

Medium :Tamil

*Registered Candidate for Membership*
Asia Theological Association (ATA)
Recognised by International Christian Leaders & Senior Pastors for the past 54 years

Diploma in Ministry : One year
Diploma in Theology : Two years
Bachelor of Theology : Three years

Qualification : 10th Standard & above
Rush for Admission!

Contact : The Chairman, Nehemiah Bible College.
10, MOHAMMED ABDULLAH 2ND STREET, BELLS ROAD, CHEPAUK, CHENNAI - 600 005, INDIA.
Phone : (+91-44) 2852 8282, Cell : (+91) 98410 71852 / 95661 31858
E.mail : sam@echoofhiscall.org / Website : www.echoofhiscall.org

**ನೋಡುವುದಿಲ್ಲ, ಯೆಹೋವನೇ ನಿಮಗಾಗಿ ಯುದ್ಧ ಮಾಡುವನು; ನೀವಂತು ಸುಮ್ಮನೇ ಇರ್ರಿ ಎಂದು ಹೇಳಿದನು.** ವಿಮೋಚನಕಾಂಡ 14:13-14.

ಕೊನೆಯ ಸಾಲಿನ ಅರ್ಥವೇನು ನೀವಂತು ಸುಮ್ಮನೇ ಇರ್ರಿ? ಇದರ ಅರ್ಥ ಇನ್ನು ಮೇಲೆ ಚಿಂತೆ ಮಾಡುವ ಅಗತ್ಯವಿಲ್ಲ. ಇನ್ನು ಮಂದೆ ಎಲ್ಲವನ್ನೂ ಕಂಡುಹಿಡಿಯಲು ಪ್ರಯತ್ನಿಸುತ್ತಿಲ್ಲ ಮತ್ತು ಬದಲಿಗೆ ನಿಮಗಾಗಿ ಒಂದು ಮಾರ್ಗವನ್ನು ಮಾಡಲು ದೇವರನ್ನು ನಂಬಿರಿ. ಅದಕ್ಕಾಗಿ ದೇವರ ವಾಕ್ಯವು ನಿಮಗೆ ಮಾರ್ಗದರ್ಶನವನ್ನು ಮಾಡುತ್ತದೆ. ಇಸ್ರಾಯೇಲ್ಯರಿಗೆ ಮಾಡಿದ ಹಾಗೆ, **ಮುಂದೆ ಹೋಗಿರಿ.** ವಿಮೋಚನಕಾಂಡ 14:15.

ಯೆಹೋಶುವ ಕೂಡ ಕಷ್ಟಕರವಾದ ವೈರಿಗಳನ್ನು ಎದುರಿಸಿದನು. ಆತನು ಮತ್ತು ಆತನ ಸೈನ್ಯವು ಇಡೀ ರಾತ್ರಿ ಗಿಬೋನ್ ಕಡೆಗೆ ಹೋಗ ಬೇಕಾಯಿತು. ಅಲ್ಲಿ ಅವರು ಐದು ಒಕ್ಕೂಟದ ರಾಜರ ಬೃಹತ್ ಮಿಲಿಟರಿ ಯಂತ್ರವನ್ನು ಎದುರಿಸಿದರು. ಯೆಹೋಶುವನ ಯುದ್ಧದ ಸ್ಥಳವನ್ನು ನೋಡಿದಾಗ, ಅವನು ಕಣಿವೆಯ ಪ್ರಬಲ ರಥಗಳು ಮತ್ತು ಉತ್ತಮ ತರಬೇತಿ ಪಡೆದ ಪದಾತಿದಳಗಳಿಂದ ತುಂಬಿರುವುದನ್ನು ಕಂಡನು. ಆದರೂ ಅವನಿಗಿದ್ದದ್ದು ಕೌಶಲ್ಯವಿಲ್ಲದ ಪುರುಷರ ದಣಿದ ಗುಂಪು.

ಒಂದು ಕ್ಷಣದಲ್ಲಿ, ಯೆಹೋಶುವನ ಮೇಲೆ ಹತಾಶೆಯ ಮೋಡ ಕವಿಯಿತು. ಅವನು ಬಹುಶಃ ಯೋಚಿಸಿದನು, ಕರ್ತನೇ ನಾವು ಕೇವಲ ಇಲ್ಲಿಗೆ ಬಂದಿದ್ದೇವೆ ಮತ್ತು ಈಗ ನಾವು ಈ ಪ್ರಬಲ ಶತ್ರುವಿನ ವಿರುದ್ಧ ಹೋರಾಡಬೇಕಾಗಿದೆ. ನೀನು ಏನು ಮಾಡುವದಕ್ಕೆ ಹೋಗುತ್ತೀ ದಯಮಾಡಿ ತಿಳಿಸು?

ದೇವರ ವಾಕ್ಯವು ಹೇಳುತ್ತದೆ, **ಯೆಹೋವನು ಯೆಹೂಶುವನಿಗೆ ಅವರಿಗೆ ಹೆದರಬೇಕು; ಅವರನ್ನು ನಿನ್ನ ಕೈಗೆ ಒಪ್ಪಿಸಿದ್ದೇನೆ. ಅವರಲ್ಲಿ ಒಬ್ಬನೂ ನಿನ್ನ ಮುಂದೆ ನಿಲ್ಲುವದಿಲ್ಲ,** ಯೆಹೋಶುವ 10:08.

ದೇವರು ಯೆಹೋಶುವನ ಯುದ್ಧ ಸ್ಥಳಕ್ಕೆ ಹೋಗುವದಕ್ಕೆ ಮುಂಚಿತವಾಗಿ ವಿಜಯುವನ್ನು ಪ್ರಕಟಿಸಿದನು. ಜಯವು ಈಗಾಗಲೇ ಗೆದ್ದಿದೆ ಎಂದು ಹೇಳಿದನು! ಯುದ್ಧದ ನಂತರ ಈ ಶತ್ರು ಸೈನಿಕರಲ್ಲಿ ಒಬ್ಬರೂ ನಿಲ್ಲುವದಿಲ್ಲ. ಈಗ ನೀನು ಹೋಗಿ ಯುದ್ಧಮಾಡು. ನಾನು ನಿನಗೆ ವಿಜಯದ ವಾಗ್ದನವನ್ನು ಕೊಟ್ಟಿದ್ದೇನೆಂದು ಗೊತ್ತುಮಾಡಿಕೊ!

ಅದು ಶಿಲುಬೆಯ ಸಂದೇಶವಾಗಿದೆ! ಈಗಾಗಲೇ ನಮಗಾಗಿ ಯುದ್ಧವು ಜಯಿಸಿದ್ದಾಗಿದೆ. ನಾವು ಯಾವುದೇ ಬಿಕ್ಕಟ್ಟನ್ನು ಎದುರಿಸಲಿ, ನಮ್ಮ ಮುಂದೆ ಶಕ್ತಿಯುಳ್ಳ ಸಮಸ್ಯೆಗಳು ಇರಲಿ. **ನಮ್ಮ ವಿಜಯವು ನಿಶ್ಚಯವಾಗಿದೆ. ಆದರೆ ನಮ್ಮನ್ನು ಪ್ರೀತಿಸಿದಾತನ ಮೂಲಕವಾಗಿ ನಾವು ಈ ಎಲ್ಲಾ ವಿಷಯಗಳಲ್ಲಿ ಪೂರ್ಣಜಯಶಾಲಿ ಗಳಾಗುತ್ತೇವೆ.** ರೋಮಾ 8:37.

ನಾವು ಏನು ಮಾಡಬಾರದು ಎಂಬುದು ಇದರ ಅರ್ಥವ, ನಾವು ನಿಂತುಕೊಳ್ಳಬೇಕಾಗಿದೆ ಮತ್ತು ನಮ್ಮ ಎಲ್ಲಾ ಶತ್ರುಗಳನ್ನು ಸಂಹಾರ ಮಾಡಲು ದೇವರು ತನ್ನ ದೂತರನ್ನು ಕಳುಹಿಸುತ್ತಾನೆಂಬ ಅಪೇಕ್ಷೆ ಇರಬೇಕಾಗಿದೆ? ಇಲ್ಲ ಎಂದಿಗೂ ಇಲ್ಲ. ದೇವರು ನಮಗೆ ವಿಜಯವನ್ನು ಪ್ರಕಟಿಸಿದ್ಯಾಗೂ? **ಆತನು ನಮಗಾಗಿ ನಮ್ಮ ಪಾಲಿನ ಕೆಲಸವನ್ನು ಮಾಡುವುದಿಲ್ಲ. ನಂಬಿಕೆಯೆಂಬ ಗುರಾಣಿಯನ್ನು ಹಿಡುಕೊಳ್ಳಿರಿ; ಅದರಿಂದ ನೀವು ಕೆಡುಕನ ಅಗ್ನಿಬಾಣಗಳನ್ನೆಲ್ಲಾ ಆರಿಸುವದಕ್ಕೆ ಶಕ್ತರಾಗುವಿರಿ. ಇದಲ್ಲದೆ ರಕ್ಷಣೆಯೆಂಬ ಶಿರಸ್ತ್ರಾಣವನ್ನು ಇಟ್ಟುಕೊಂಡು ಪವಿತ್ರಾತ್ಮನು ಕೊಡುವ ದೇವರ ವಾಕ್ಯವೆಂಬ ಕತ್ತಿಯನ್ನು ಹಿಡಿಯಿರಿ.** ಎಫೆಸದವರಿಗೆ 6:16-17

ನಾವು ಇನ್ನೂ ಶತ್ರುಗಳ ವಿರುದ್ಧ ಹೋರಾಡಲು ಕತ್ತಿಯನ್ನು ಎತ್ತಿಕೊಳ್ಳಬೇಕು, ವ್ಯತ್ಯಾಸವೆನೆಂದರೆ, ದೇವರು ನಮಗೆ ಅಧಿಕಾರ ನೀಡುವುದಾಗಿ ವಾಗ್ದನವನ್ನು ನೀಡಿದ್ದಾನೆ ಎಂದು ನಂಬುವ ಮೂಲಕ ನಾವು ಅದನ್ನು ಮಾಡಬೇಕು.ಆದರೆ ದೇವರು ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ನಮಗೆ ಜಯವನ್ನು ಕೊಟ್ಟಿದ್ದಾನೆ; ಆತನಿಗೆ ಸ್ತೋತ್ರ. 1 ಕೊರಿಂಥ 15:57.

ಪರಿಶುದ್ಧಾತ್ಮನು ನಮ್ಮ ನಂಬಿಕೆಗೆ ಪ್ರತುತ್ತರಿಸುತ್ತಾನೆ. ನಾವು ಆತನನ್ನು ಕರೆದಾಗ, ಆತನು ಮಾಂಸದ ಕಾರ್ಯಗಳನ್ನು ನಾಶಮಾಡಲು ಅಲೌಕಿಕ ಶಕ್ತಿಯೊಂದಿಗೆ ನಮ್ಮ, ಮೇಲೆ ಬರುತ್ತಾನೆ. ನಮ್ಮ ಪಾತ್ರವು ನಂಬಿಕೆಯಾಗಿದೆ ಮತ್ತು ದೇವರು ಆತ್ಮವು ನಮ್ಮ ವಿರುದ್ಧ ಬರುವ ದುಷ್ಟ ಶಕ್ತಿಯನ್ನು ವಿರೋಧಿಸುತ್ತದೆ ಎಂಬ ನಂಬಿಕೆಯಲ್ಲಿ ನಡೆಯುವುದು.

## 2. ಹಿಂದೆ ನಮ್ಮ ಶತ್ರುಗಳನ್ನು ಹೇಗೆ ಸೋಲಿಸಿದನು ಎಂಬುದನ್ನು ನೆನಪಿಟ್ಟು ಕೊಳ್ಳಲು ದೇವರು ನಮಗೆ ಅಜ್ಞಾಪಿಸಿದನು.

ಮೋಶೆಯು ಇಸ್ರಾಯೇಲ್ಯರಿಗೆ ಈ ರೀತಿಯಾಗಿ ಸಲಹೆ ಕೊಟ್ಟನು. **ಅವರಿಗೆ ಹೆದರಬೇಡಿರಿ; ನಿಮ್ಮ ದೇವರಾದ ಯೆಹೋವನು ಫರೋಹನಿಗೂ ಐಗುಪ್ತರೆಲ್ಲರಿಗೂ ಮಾಡಿದ್ದನ್ನು ನೆನಪಿಗೆ ತಂದುಕೊಳ್ಳಿರಿ. ನೀವು ಅಗ ಕಣ್ಣಾರೆ ನೋಡಿದ ಪ್ರಕಾರ ಆತನು ವಿಶೇಷ ಮನಶೋಧನೆ, ಮಹತ್ಕಾರ್ಯ, ಉತ್ಪಾತ, ಭುಜಪರಾಕ್ರಮ, ಶಿಕ್ಷೆ ಇವುಗಳನ್ನು ಪ್ರಯೋಗಿಸಿ ನಿಮ್ಮನ್ನು ಬಿಡುಗಡೆ ಮಾಡಿದನಲ್ಲಾ, ನೀವು ಹೆದರಿಕೊಳ್ಳುವ ಆ ಎಲ್ಲಾ ಜನಾಂಗಗಳಿಗೂ ಆತನು ಹಾಗೆಯೇ ಮಾಡುವನು.** ಧರ್ಮೋಪದೇಶ ಕಾಂಡ 7:18-9.

ಎಂತಹ ಅದ್ಭುತ ಸಂದೇಶ!ಮೋಶೆಯು ಇಸ್ರಾಯೇಲ್ಯರಿಗೆ ಜ್ಞಾಪಿಸುತ್ತಾನೆ. ನೀವು ಎಂತಹ ಶತ್ರುಗಳನ್ನು ಎದುರಿಸಿದರೂ ಕೂಡ, ಅವರೆಲ್ಲರ ಮೇಲೆ ದೇವರು ನಿಮಗೆ ವಿಜಯವನ್ನು ಕೊಡುತ್ತೇನೆಂದು ವಾಗ್ದಾನಮಾಡಿದ್ದಾನೆ. ಫರೋಹನನ ಕೈಗಳಿಂದ ನಿಮ್ಮ ತಂದೆಗಳನ್ನು ಬಿಡಿಸಿದ್ದಾನೆ ಮತ್ತು ಈ ಹೊತ್ತು ಅದನ್ನೇ ನಿಮಗೆ ಮಾಡುತ್ತಾನೆ!

**ಐಗುಪ್ತದೇಶದಿಂದ ನಿಮಗೆ ಬಿಡುಗಡೆ ಯಾದ ದಿನವು ನಿಮ್ಮ ಜೀವ ಮಾನವೆಲ್ಲಾ ನೆನಪಿನಲ್ಲಿರುವಂತೆ. ಧರ್ಮೋಪದೇಶಕಾಂಡ 16:3. ಐಗುಪ್ತ ದೇಶದಲ್ಲಿ ದಾಸರಾಗಿದ್ದೇವೆಂಬದನ್ನು ನೀವು ನೆನಪಿಗೆ ತಂದು ಕೊಂಡು ಈ ವಿಧಿ ಗಳನ್ನು ಅನುಸರಿಸಿ ನಡೆಯಬೇಕು.** ಧರ್ಮೋಪದೇಶಕಾಂಡ 16:12.

ಮೋಶೆಯು ಇಸ್ರಾಯೇಲ್ಯರಿಗೆ ಹೀಗೆ ಕೂಗುತ್ತಾನೆ,ಹಿಂದಿನ ದಿನಗಳನ್ನು ಜ್ಞಾಪಿಸಿಕೊಳ್ಳಿರಿ! ಅರಣ್ಯದಲ್ಲಿ ನಿಮಗೆ ಕಷ್ಟಕರವಾದ ಸಮವೆಂದು ನೀವು ಅಲೋಚಿಸಿದರೆ, ಐಗುಪ್ತದಲ್ಲಿ ನೀವು ಎದುರಿಸಿದ ಎಲ್ಲಾ


**A good opportunity to get**
**Echo of His Call**
**monthly magazine at free of cost**

If you could send the addresses of your friends / relatives through post, letter, e.mail, WhatsApp or phone to us, we will dispatch **Echo of His Call** monthly magazine to them at free of cost.



## TAX EXEMPTION

Donations by any individual or organization from India to **Echo of His Call Educational Trust** are eligible for Income Tax exemption under Section 80G of the Income Tax Act. Official receipts will be issued for this purpose. Please make your Demand Drafts / Cheques / M.O. for such donations in favour of **Echo of His Call Educational Trust** and send to us, along with your Aadhar Number and PAN for getting Income Tax Exemption.

| | | |
|---|---|---|
| **Account Name** | : | **ECHO OF HIS CALL EDUCATIONAL TRUST** |
| **Account Number** | : | **1023 2923 805** |
| **Bank Name** | : | **STATE BANK OF INDIA** |
| **Branch** | : | **TRIPLICANE, CHENNAI - 600 005** |
| **IFSC Code** | : | **SBIN 0000249** |
| **SWIFT Code** | : | **SBI NIN BB 455** |



# ಹಳ್ಳದಿಂದ ಅರಮನೆಗೆ

# PIT TO PALACE

(ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್‌ರವರ ಜೀವನದ ಅನುಭವಗಳು)

"ಯಾರು ಓದುತ್ತಾರೋ ಅವರೇ ಅರ್ಥವಾಗಲಿ" (ಮತ್ತಾಯ 24:15)

## ಉದ್ದವಾದ ಗಡ್ಡವನ್ನು ಹೊಂದಿರುವ ಸುಂದರವಾದ ವ್ಯಕ್ತಿ!

ಯೆಹೋವನ ದೂತನು ಗಿದ್ಯೋನನಿಗೆ ಪ್ರತ್ಯಕ್ಷನಾಗಿ ಅವನಿಗೆ ಪರಾಕ್ರಮಶಾಲಿಯೇ, ಯೆಹೋವನು ನಿನ್ನ ಸಂಗಡ ಇದ್ದಾನೆ ಅಂದನು. ನ್ಯಾಯಸ್ಥಾಪಕರು 6:12.

## HANDSOME MAN WITH LONG BEARD!

ಚೆನ್ನೈನಲ್ಲಿರುವ ನಮ್ಮ ಮೊದಲ ಸಭೆಯ ಬಳಕೆಗಾಗಿ ನಾನು ನನ್ನ ಬಾಡಿಗೆ ಮನೆಯಲ್ಲಿ ಹೆಚ್ಚಿನ ಜಾಗವನ್ನು ಮಂಜೂರು ಮಾಡಿದೆ, ಇದು ಅಕ್ಬರ್ ಸಾಹಿಬ್ ಎಂಬ ಬೀದಿಯಲ್ಲಿದೆ. ನಮ್ಮ ಎಲ್ಲಾ ನೆರೆಹೊರೆಯವರು ಮುಸ್ಲಿಂಮರು ಸಹೋದರರು ಅವರು ಕರ್ತನಾದ ಯೇಸುಕ್ರಿಸ್ತನ ಸುವಾರ್ತೆಯನ್ನು ಇಷ್ಟಪಡದೆ ಇರುವವರು. ಆದರೆ ದೇವರು ಆತನ ಕೆಲಸವನ್ನು ಅದೇ ಪ್ರದೇಶದಲ್ಲಿ ಮಾಡುವದಕ್ಕೆ ನನಗೆ ಪದನ್ನೋತಿ ಮಾಡಿದನು!

ನನ್ನ ಸುವಾರ್ತೆಚಟುವಟಿಕೆಗಳ ಜೊತೆಗೆ ಮತ್ತು ವ್ಯಯಕ್ತಿಕ ಸುವಾರ್ತೆ, ನಾನು ಪ್ರತಿ ಭಾನುವಾರ ಆರಾಧನೆಯನ್ನು 9 ಗಂಟೆಗೆ ಪ್ರಾರಂಭಿಸಿದೆನು. ಈ ಒಂದು ಆರಾಧನೆಯಲ್ಲಿ ನನಗೆ ಹಾಡುವ ಮತ್ತು ನನ್ನ ಸಂಗೀತ ವಾದ್ಯದೊಂದಿಗೆ ದೇವರನ್ನು ಆರಾಧಿಸುವ ಅಭ್ಯಾಸ ವಿತ್ತು. ಅರ್ಕೆಡಿಯನ್, ನನ್ನ ಮುಂದೆ ದೊಡ್ಡ ಸಮೂಹವಿದೆ ಎಂದು. ಆ ಪ್ರದೇಶದ ಜನರು ಮತ್ತು ಸಾರ್ವಜನಿಕರು ಈ ಒಂದು ಶಬ್ದದಿಂದ ಜನರಿಗೆ ಇಷ್ಟವಿರಲಿಲ್ಲ. ಆದ್ದರಿಂದ ಮೊದಲ ಕೆಲವು ವರ್ಷಗಳವರೆಗೆ ಹಾಜರಾತಿಯು ಶೂನ್ಯಕ್ಕೆ ಬಹಳ ಕಡಿಮೆಯಾಗಿತ್ತು.

1984 ವರ್ಷದಲ್ಲಿ ಒಂದು ನಿರ್ದಿಷ್ಟ ಭಾನುವಾರದಂದು, ಸಭೆಯ ಆರಾಧನೆಗೆ ಸ್ಥಳವನ್ನು ನಾನು ಸಿದ್ದಮಾಡಿದೆನು ಮತ್ತು ಆರಾಧನೆಯನನ್ನು ಪ್ರಾರಂಭಿಸುವದಕ್ಕೆ ಎಲ್ಲಾ ಸಿದ್ದತೆಯನ್ನು ಮಾಡಿಕೊಂಡೆನು. ನಾನು ಆಸಕ್ತಿಯುಳ್ಳವನಾಗಿ ದೇವರು ಕೆಲವು ಆತ್ಮಗಳನ್ನು ಈ ಆರಾಧನೆಗೆ ಕರೆದುಕೊಂಡು ಬರುವಂತೆ ಪ್ರಾರ್ಥಿಸಿದೆನು. ಒಂದು ನಿರ್ದಿಷ್ಟವಾದ ದಿನದಂದು ಯಾರು ಬರಲಿಲ್ಲವಾದ್ದರಿಂದ, ನಾನು ನನ್ನ ಆತ್ಮದಲ್ಲಿ ನೊಂದುಕೊಂಡೆನು ಮತ್ತು ದೈಹಿಕವಾಗಿ ಸುಸ್ತಾದೆನು. ನಾನು ನನ್ನ ಬೇರೊಂದು ಕೋಣೆಗೆ ಮುರಿದ ಹೃದಯವುಳ್ಳವನಾಗಿ ಕೂತುಕೊಂಡೆನು.

ಆ ಸಮಯದಲ್ಲಿ ನಾನು ಒಂದು ದರ್ಶನವನ್ನು ಕಂಡೆನು. ಒಬ್ಬ ಮುದುಕ ಸುಂದರವಾದ ಉದ್ದವಾದ ಗಡ್ಡವುಳ್ಳ ಮನುಷ್ಯನು ನಮ್ಮ ಸಭೆಯ ಮುಖ್ಯವಾದ ಬಾಗಿಲಿನಿಂದ ಸಭೆಯ ಹಾಲ್‌ಗೆ ಬಂದನು. ಒಳ್ಳೆಯ ಸಂಖ್ಯೆಯ ಜನರು ಆತನನ್ನು ಹಿಂಬಾಲಿಸಿದರು. ಆದರೆ ಅವರ ಮುಖವು ನನಗೆ ಸ್ಪಷ್ಟವಾಗಿ ಕಾಣಲಿಲ್ಲ. ಆತನು ಮತ್ತು ಆತನ ಜೊತೆಗಿರುವ ಜನರು, ವಿದ್ಯುತ್ ಬಲ್ಬ್ ಮತ್ತು ಫ್ಯಾನ್‌ಗಳನ್ನು ಪ್ರಾರಂಭಿಸಿ, ಮೊಣಕಾಲೂರಿ ಪ್ರಾರ್ಥನೆ ಮಾಡಿ ಮತ್ತು ಜೀವಿಸುವ ದೇವರನ್ನು ಆರಾಧಿಸುವದಕ್ಕೆ ಪ್ರಾರಂಭಿಸಿದರು. ಶಬ್ದವು ಬಹಳ ಬಲವಾಗಿರುವದರಿಂದ, ನಾನು ಮಲಗಿಕೊಳ್ಳುದಕ್ಕೆ ಆಗಲಿಲ್ಲ. ನಾನು ಎದ್ದು ಬಹಳ ಭಯ ಮತ್ತು ಮರ್ಯಾದೆಯಿಂದ ಆ ಒಂದು ಕೋಣೆಯನ್ನು ನಾನು ಪ್ರವೇಶ ಮಾಡಿದೆನು.ಆದರೆ ಅಲ್ಲಿ ಯಾರು ಇರಲಿಲ್ಲ. ಆ ಮನುಷ್ಯನು ಮತ್ತು ಜನರು ತಕ್ಷಣವೇ ಆ ಕೋಣೆಯಿಂದ ಕಾಣೆಯಾದರು.

ಕೆಲವು ನಿಮಿಷಗಳ ನಂತರ, ದೇವರ ಸೇವಕರಾದ ಡಾ.ಘನ. ಬೆವಿನ್ ಲಾರೆನ್ಸ್ ಮತ್ತು ಆತನ ಹೆಂಡತಿಯಾದ ಸೆರಿನಾ ಬಿವಿನ್ ಅವರು ಹೊಸದಾಗಿ ಹುಟ್ಟಿದ ತಮ್ಮ ಮಗುವನ್ನು ತೆಗೆದುಕೊಂಡು ಸಭೆಯ ಒಳಗೆ ಪ್ರವೇಶ ಮಾಡಿದರು. ಆ ದಿನ ಸಭೆಗೆ ಭೇಟಿ ನೀಡಲು ದೇವರ ಆತ್ಮದಿಂದ ಉತ್ತೇಜಿಸಲ್ಪಟ್ಟಿದ್ದೇವೆ ಎಂದು ಅವರು ಹೇಳಿದರು. ಮತ್ತೆ ಕೆಲವು ನಿಮಿಷಗಳ ನಂತರ ಹೊಸ ಜನರು ನಮ್ಮ ಆರಾಧನೆಗೆ ಬಂದರು. ಇದಾದನಂತರ ನಮ್ಮ ಸಭೆಯನ್ನು ದೇವರು ಹೆಚ್ಚುಹೆಚ್ಚಾಗಿ ಆಶೀರ್ವಾದ ಮಾಡಿದನು.

ನಮ್ಮ ದೇವರು ಎಲ್ಲಾ ಸಮಯದಲ್ಲಿ ಒಳ್ಳೆಯವನಾಗಿದ್ದಾನೆ. ಆತನು ಯಾರಾದರೂ ಜೀವಿತದಲ್ಲಿ ಅದ್ಭುತಗಳನ್ನು ಮಾಡುತ್ತಾನೆ. ಯಾವುದೇ ಸಮಯದಲ್ಲಿ ಮತ್ತು ಯವುದೇ ಮಾರ್ಗದಲ್ಲಿ. ಇಂದು ನಿಮ್ಮ ಸ್ವಂತ ಜೀವನದಲ್ಲಿ ದೈವಿಕ ಹಸ್ತಕ್ಷೇಪಕ್ಕಾಗಿ ನೀವು ಆತನನ್ನು ನಂಬಬಹುದು.

*******

---

ಭಯಗಳನ್ನು ಅಲೋಚಿಸಿರಿ. ನೀವು ದಾಸರಾಗಿದ್ದಾಗ ನಿಮ್ಮ ಜೀವಿತವು ಹೇಗೆ ಇತ್ತು ಎಂಬುದನ್ನು ಮರೆಯ ಬೇಡಿ. ದೇವರು ಎಲ್ಲಾವನ್ನು ಮಾಡಿದ್ದು ನಿಮ್ಮ ಬಿಡುಗಡೆಗಾಗಿ. ನಿಮ್ಮನ್ನು ರಕ್ಷಿಸಿ ಮತ್ತು ಅವೆಲ್ಲವುಗಳಿಂದ ನಿಮ್ಮನ್ನು ಶುದ್ದೀಕರಿಸುವದಕ್ಕಾಗಿ!

ಭಯದಲ್ಲಿ ಇರುವ ಜನರಿಗೆ ಪ್ರವಾದಿ ಯಾದ ಯೆಶಾಯನು ಕೂಡ ದೇವರ ಮಾತಗಳನ್ನು ಮಾತನಾಡಿದನು. ಇದು ಆ ಸಮಯವಾಗಿತ್ತು, ಇಸ್ರಾಯೇಲ್ಯರಿಗೆ ದೇವರು ಅವರನ್ನು ಕೈಬಿಟ್ಟಿದ್ದಾನೆ ಎಂಬ ಮನವರಿಕೆ ಯಾದಗ. ತಮ್ಮ ಶತ್ರುಗಳು ಏನು ಮಾಡಬಹುದೆಂಬ ಭಯದಲ್ಲಿ ಅವರು ನಡುಗಿದರು. ಆದರೆ ಯೆಶಾಯ ಅವರಿಗೆ ಭರವಸೆಯನ್ನು ಕೊಟ್ಟನು.

**ನಾನೇ, ನಾನೇ ನಿನ್ನನ್ನು ಸಂತೈಸುವವನಾಗಿ ರವಲ್ಲಿ ಮರ್ತ್ಯಮನುಷ್ಯನಿಗೆ, ಹುಲ್ಲಿಗೆ ಗತಿಗೆ ಬರುವ ನರಜನ್ಮದವನಿಗೆ ಭಯಪಡುವ ನೀನು ಎಂಥವನು? ಆಕಾಶಮಂಡಲವನ್ನು ಹರಡಿ ಭೂಲೋಕವನ್ನು ಸ್ಥಾಪಿಸಿದ ನಿನ್ನ ಸೃಷ್ಟಿ ಕರ್ತನಾದ ಯೆಹೋವನನ್ನು ಮರೆತು ಬಿಟ್ಟಿಯಾ?** ಯೆಶಾಯ 51:12-13.

ದೇವರು ಪ್ರವಾದಿಯ ಮೂಲಕ ಹೇಳಿದನು, ನಾನು ಯಾರೆಂಬುದನ್ನು ನೀನು ಮರೆತಿರುವ ಕಾರಣ ನೀನು ಭಯಪಡುತ್ತಾ ಇದ್ದೀ. ನನ್ನ ಶಕ್ತಿಯನ್ನು ನೋಡದೆ ನೀನು ಕೇವಲ ನಿನ್ನ ಸಮಸ್ಯೆಗಳನ್ನು ನೋಡುತ್ತೀ ಮತ್ತು ನಿನ್ನನ್ನು ವಿಮೋಚಿಸುವ ಸಾಮರ್ಥ್ಯ. ನಿನ್ನ ಜೀವಿತದಲ್ಲಿ ನನ್ನ ಕೈಯು ನಿನ್ನ ಮೇಲೆ ಇರುವದನ್ನು ನೀನು ಮರೆತಿರುವೆ!

ನಿಮ್ಮ ಜೀವನದಲ್ಲಿ ದೇವರ ಅದ್ಭುತವನ್ನು ನೆನಪಿಸಿಕೊಳ್ಳುವದು ನಿಮಗೆ ತೊಂದರೆ ಯಾಗಬಹುದು. ನನ್ನ ಜೀವನ ದೊಡ್ಡದಾಗಿದೆ ಎಂದು ಯೋಚಿಸಿರಬಹುದು, ಕೆಟ್ಟ ಕನಸುಗಳು. ನಾನು ಕೇವಲ ಸಂತೋಷಪಡಲು ಹೆಚ್ಚು ಹೊಂದಿಲ್ಲ. ನಾನು ದೇವರ ಉಪಕಾರಗಳನ್ನು ಅನುಭವಿಸಿಲ್ಲ ಹೇಗೆ ನಾನು ಜ್ಞಾಪಕಮಾಡಿ ಕೊಳ್ಳಲಿ ?

ನಮ್ಮ ಅನುಭವಗಳು ನಂಬಿಕೆಯನ್ನು ಉತ್ತೇಜಿಸುತ್ತದೆ ಎಂಬುದನ್ನು ನಾವು ಅರ್ಥಮಾಡಿ ಕೊಳ್ಳಬೇಕು. ಆದರೆ ಅವುಗಳು ನಮ್ಮ ನಂಬಿಕೆಯ ಬುನಾದಿಯಾಗಿರಬಾರದು. ಆದ್ದರಿಂದ ದೇವರ ವಾಕ್ಯವು ಯಾವಾಗಲೂ ಯೇಸುಕ್ರಿಸ್ತನು ಏನು ಮಾಡಿದ್ದಾನೋ ಎಂಬುದನ್ನು ತೋರಿಸುತ್ತದೆ. ಆತನು ಶಿಲುಬೆಯಲ್ಲಿ ಜಯಹೊಂದಿದ್ದನು ನಾವು ಜ್ಞಾಪಕಮಾಡಿಕೊಳ್ಳಬೇಕು. ನಂಬಿಕೆಯಿಂದ ಅದನ್ನು ಅಂಟಿಕೊಳ್ಳಿ. ಆತನು ಮಾತ್ರ ತನ್ನ ಆತ್ಮದಿಂದ ನಮಗೆ ವಿಜಯವನ್ನು ಸಾಧಿಸಲು ಅಧಿಕಾರವನ್ನು ನೀಡುತ್ತಾನೆ.

**ನಾನು ತಂದೆಯ ಬಳಿಗೆ ಹೋಗುತ್ತೇನೆ ನಾನು ನಿಮ್ಮನ್ನು ಅನಾಥರಾಗಿ ಬಿಡುವುದಿಲ್ಲ ಯೇಸುಕ್ರಿಸ್ತನು ಹೇಳಿದನು.**

**ಈಗ ನಾನು ನನ್ನನ್ನು ಕಳುಹಿಸಿದವನ ಬಳಿಗೆ ಹೋಗುತ್ತೇನೆ ಎಂದು ಯೇಸುಕ್ರಿಸ್ತನು ತನ್ನ ಶಿಷ್ಯರಿಗೆ ಹೇಳಿದನು.** ಯೋಹಾನ 16:5, **ನಾನು ನಿಮ್ಮನ್ನು ಅನಾಥರಾಗಿ ಬಿಡುವುದಿಲ್ಲ.** ಯೋಹಾನ 14:18. ಗ್ರೀಕ್ ಭಾಷೆಯಲ್ಲಿ ಅನಾಥರೆಂದರೆ, ದುಃಖ ದಲ್ಲಿರುವವರು, ತಂದೆಯಿಲ್ಲದವರು.

ನಂತರ ಶಿಷ್ಯರು ನೀವೆಲ್ಲರೂ ಒಬ್ಬಂಟಿ ಯಾಗಿದ್ದೀರಿ ಮತ್ತು ದೇವರು ನಿಮಗಾಗಿ ಕೆಲಸ ಮಾಡುತ್ತಿಲ್ಲ ಎಂದು ಕೆಲವೊಮ್ಮೆ ನಿಮಗೆ ಅನಿಸಬಹುದು. ಆತನ ಕಾಳಜಿಯ ಯಾವುದೇ ರುಜುವನ್ನು ಕಾಣುವುದಿಲ್ಲ. ದೇವರ ಆತ್ಮವು ನಿಮ್ಮನ್ನು ಒಂದು ಕಾಲಕ್ಕೆ ಬಿಟ್ಟುಹೋಗಿದೆ ಮತ್ತು ಆತನು ನಿಮ್ಮನ್ನು ವೃದ್ಧಾಪದಲ್ಲಿ ಕಾಪಾಡುತ್ತಾನೆ ಎಂದು ಸೈತಾನನು ನಿಮಗೆ ಸುಳ್ಳು ಹೇಳುತ್ತಾನೆ.

ಆದರೆ ಅಲ್ಲಿ ಒಂದು ನಂಬಲಾಗದ ಅದ್ಭುತವಿದೆ ಅದನ್ನು ಮರೆಯುವುದಿಲ್ಲ. ಆತನನ್ನು ಹಿಂಬಾಲಿಸುವವರಿಗೆ ಯೇಸುಕ್ರಿಸ್ತನು ವಾಗ್ದಾನವನ್ನು ಮಾಡಿದ್ದಾನೆ.ನಾನು ನಿಮ್ಮನ್ನು ಅನಾಥರಾಗಿ ಬಿಡುವುದಿಲ್ಲ! ನಾನು ನಿಮಗಾಗಿ ಬೆಲೆಯನ್ನು ಕೊಟ್ಟಿದ್ದೇನೆ!! ನೀನು ನನ್ನವನು!

ನೀವು ಯಾವುದೇ ಮೂಲಕ ಹೋಗುತ್ತಿದ್ದರೂ ಪರವಾಗಿಲ್ಲ. ನಿಮ್ಮ ಪರಲೋಕದ ತಂದೆಯು ಒಂದು ಸಾರಿಯು ಕೂಡ ತಳ್ಳಿಬಿಡುವುದಿಲ್ಲ ಮುರಿಯಲಾಗದ ನಿತ್ಯತ್ವದ ಆತನ ವಾಗ್ದಾನವನ್ನು ಕೇಳಿರಿ.

**ಚೀಯೋನ್ ನಗರಿಯಾದರೋ ಯೆಹೋ ವನು ನನ್ನನ್ನು ಕೈಬಿಟ್ಟಿದ್ದಾನೆ. ಕರ್ತನು ನನ್ನನ್ನು ಮರೆತಿದ್ದಾನಲ್ಲಾ ಅಂದುಕೊಂಡಳು. ಒಬ್ಬ ಹೆಂಗಸು ತಾನು ಹೆತ್ತ ಮಗುವಿನ ಮೇಲೆ ಕರುಣೆಯಿಡದೆ ತನ್ನ ಮೊಲೆ ಕೂಸನ್ನು ಮರೆತಾಳೇ? ಒಂದು ವೇಳೆ ಮರೆತಾಳು, ನಾನಾದರೆ ನಿನ್ನನ್ನು ಮರೆಯೆ, ಇಗೋ, ನನ್ನ ಅಂಗೈಗಳಲ್ಲಿ ನಿನ್ನನ್ನು ಚಿತ್ರಿಸಿದ್ದೇನೆ; ನಿನ್ನ ಪೌಳಿ ಗೋಡೆಗಳು ಸದಾ ನನ್ನ ಕಣ್ಣೆದುರಿನಲ್ಲಿವೆ.** ಯೆಶಾಯ 9:14-16.

ಈ ವಾಕ್ಯಭಾಗವು ನಮಗೆ ಹೇಳುತ್ತದೆ, ನಿನಗೆ ಬೇಕಾಗಿರುವ ರಕ್ಷಣೆಯು ಯಾವಾಗಲೂ ನಮ್ಮ ಕಣ್ಣುಮುಂದೆ ಇದೆ.ನಿಮ್ಮ ಸುತ್ತಲೂ ನನ್ನ ಅಲೌಕಿಕ ಗೋಡೆಗಳನ್ನು ಸುರಕ್ಷಿತವಾಗಿರಿಸಿಕೊಳ್ಳುವ ಬಗ್ಗೆ ನಾನು ಚಿಂತಿಸುವ ಕ್ಷಣವೂ ಇಲ್ಲ!! ನನ್ನ ರಕ್ಷಣಾತ್ಮಕ ಹೆಡ್ಜ್ ಯಾವಾಗಲೂ ಇರುತ್ತದೆ!!!

ನನಗೆ ಕೆಲವು ತಾಯಿಂದರು, ಸಭಾಪಾಲಕರ ಹೆಂಡತಿಯರನ್ನೊಳಗೊಂಡು ಗೊತ್ತು.ಅವರು ತಮ್ಮ ಮಕ್ಕಳನ್ನು ತಿರಸ್ಕಾರಮಾಡಿದ್ದಾರೆ.ಕೆಲವು ವಾರಗಳ ಹಿಂದೆ ಒಬ್ಬ ಸಭಾಪಾಲಕರು ನಮಗೆ ಬರೆದರು. ನನಗೆ ಮದುವೆಯಾಗಿ 25 ವರ್ಷವಾಯಿತು, ಆದರೆ ಇತ್ತೀಚೆಗೆ ಮನುಷ್ಯನು ಇಂಟರ್‌ನೆಟ್ ಮೂಲಕ ಭೇಟಿಯಾಗಿ ನನ್ನನ್ನು ಬಿಟ್ಟುಹೋದಳು. ಆಕೆಯು ನನ್ನನ್ನು ಮತ್ತು ಮಕ್ಕಳನ್ನು ಬಿಟ್ಟು ಹೋದಳು. ಆಕೆಯು ಇನ್ನೂ ನಾನು ಪ್ರೀತಿ ಮಾಡುತ್ತೇನೆ. ಆಕೆಯ ತಿರುಗಿಬರಬೇಕೆಂದು ನಾನು ಬಯಸುತ್ತೇನೆ. ಆದರೆ ಅಕೆಯು ಬರುವುದಿಲ್ಲ. ಈಗ ನಾನು ಬಹಳ ನೊಂದು ಕೊಂಡಿದ್ದೇನೆ. ನನಗೆ ಮಲಗುವುದಕ್ಕೆ ಆಗುತ್ತಾ ಇಲ್ಲ. ನಾನು ಹೇಗೆ ಮಾಡುತ್ತೇನೆ ಎಂಬುದು ನನಗೆ ಗೊತ್ತಿಲ್ಲ.

ದೇವರು ಈ ಮನುಷ್ಯನಿಗೆ ಹೇಳುತ್ತಾನೆ, ನಿನ್ನ ಆತ್ಮೀಯ ಹೆಂಡತಿಯು ನಿನ್ನನ್ನು ಬಿಟ್ಟು ಹೋದರೂ, ಆದರೆ ನಾನು ನಿನ್ನನ್ನು ಬಿಡುವುದಿಲ್ಲ. ನನ್ನ ಗೋಡೆಗಳು ಯಾವಾಗಲೂ ನಿನಗೆ ಸಂರಕ್ಷಣೆಯಾಗಿ ಸುತ್ತಲೂ ಇರುತ್ತವೆ!

ನಮ್ಮ ಸೇವೆಯು ದಶಕಗಳಿಂದ ಮದ್ಯ ವ್ಯಸನಿಯ ಗಂಡನೊಂದಿಗೆ ವಾಸಿಸುವ ಮಹಿಳೆ ಯಿಂದ ಅನೇಕ ಪತ್ರಗಳನ್ನು ಸ್ವೀಕರಿಸಿತು. ಅವರ ಹತಾಶೆಯನ್ನು ನಾನು ಓದಿದೆನು, ಕರ್ತನೆ ಈ ನಂಬಿಕೆಯುಳ್ಳ ಸ್ತ್ರೀಯು ಯಾಕೆ ಇಷ್ಟು ವರ್ಷ ಕಷ್ಟಪಡಬೇಕೆಂದು ಕೇಳಿದೆನು. ಯಾವುದೇ ನಿರೀಕ್ಷೆಯ ಲಕ್ಷಣವಿಲ್ಲ? ನನ್ನ ಹೆಂಡತಿ ಯಾಕೆ ಇಷ್ಟೊಂದು ಶಾರೀರಕ ನೋವನ್ನು ಅನುಭವಿಸ ಬೇಕಾಯಿತು ಎಂದು ನನಗೆ ಅರ್ಥವಾಗಲೇ ಇಲ್ಲ. ಆಕೆಗೆ 28 ಅಪರೇಷನ್‌ಗಳು ಆಗಿವೆ,ಅದರಲ್ಲಿ 6 ಕ್ಯಾನ್ಸರ್‌ಗೆ ಸಂಭದಿಸಿದವುಗಳು. 40 ವರ್ಷಕ್ಕಿಂತ ಹೆಚ್ಚು ಘೋರವಾದ ನೋವು. ಯಾವುದೇ ಸೇವಕನು ಮತ್ತು ದೈವಶಾಸ್ತ್ರಜ್ಞನು ನಾನು ನಿರಂತರವಾಗಿ ಸಂಕಷ್ಟಗಳನ್ನು ಎದುರಿಸುತ್ತಾ ಇದ್ದೇನೆಂದು ಅರ್ಥವಾಗುವ ಹಾಗೆ ವಿವರಿಸಲಿಲ್ಲ.

ಆದರೂ, ನಮ್ಮಲ್ಲಿ ಯಾರಾದರೂ ಏನನ್ನು ಅನುಭವಿಬೇಕು ಅಥವಾ ಎಷ್ಟು ಕಾಲ ಅದನ್ನು ಸಹಿಸಿಕೊಳ್ಳಬೇಕು ಎಂಬುದು ಮುಖ್ಯವಲ್ಲ. ಎಲ್ಲಕ್ಕಿಂತ ಒಂದು ವಿಷಯ ನಿಜ:

**ಎಲ್ಲಾ ವಿಷಯಗಳಲ್ಲಿ ನಮ್ಮನ್ನು ಉಳಿಸಿಕೊಳ್ಳಲು ದೇವರ ಕೃಪೆ ಸಾಕು!**

ಅಪೋಸ್ತಲನಾದ ಪೌಲನು ಈ ರೀತಿಯಾಗಿ ಕೂಗುತ್ತಾನೆ. ನನ್ನ ದೇಹದಲ್ಲಿರುವ ಶೂಲವನ್ನು ದಯಮಾಡಿ ನನ್ನಿಂದ ವಿಮೋಚಿಸು ಕರ್ತನೇ. ಆದರೆ ಕರ್ತನ ಉತ್ತರ, **ನನ್ನ ಕೃಪೆಯೇ ನಿನಗೆ ಸಾಕು.** 2 ಕೊರಿಂಥ 12:9. ದೇವರು ತನ್ನ ಸೇವಕನಿಗೆ ಈ ರೀತಿಯಾಗಿ ಹೇಳಿದನು. ಪೌಲನೇ ನೀನು ಈ ಮುಳ್ಳಿನೊಂದಿಗೆ ಬದುಕಬೇಕು.ಆದರೆ ನಿನ್ನ ಸಮಸ್ಯೆಗಳ ಮಧ್ಯದಲ್ಲಿ, ನಿನಗೆ ಬೇಕಾಗಿರುವ ಕೃಪೆಯನ್ನು ನಾನು ಕೊಡುತ್ತೇನೆ. ನನ್ನಲ್ಲಿ ಕೊನೆಯಿಲ್ಲದ ಸಹಾಯವು ನಿನಗೆ ಇದೆ!

ಆತನ ಕೃಪೆಯು ನಮ್ಮ ಪರಿಸ್ಥಿತಿಗಳಿಗೆ ತರಬಹುದಾದ ಯಾವುದೇ ವಿಮೋಚನೆಗಿಂತ ಪ್ರಬಲವಾಗಿದೆ ಎಂದು ನಾವು ತಿಳಿದುಕೊಳ್ಳ ಬೇಕೆಂದು ಕರ್ತನು ಬಯಸುತ್ತಾನೆ. ಯಾಕೆ? ಆತನ ಕೃಪೆಯು ಆತನ ಯಾರೆಂಬುದರ ಸಂಪೂರ್ಣ ಬಹಿರಂಗಪಡಿಸುವಿಕೆಯನ್ನು ಒಳಗೊಂಡಿದೆ. ಸರಳವಾಗಿ ಹೇಳುವದಾದರೆ, ದೇವರ ಕೃಪೆಯು ಯೇಸುಕ್ರಿಸ್ತನು ಎಲ್ಲಾ ಪವಿತ್ರತೆಯಲ್ಲಿ ಸಂಪೂರ್ಣವಾಗಿ ಬಹಿರಂಗಗೊಂಡಿದ್ದಾನೆ, ಆದರೆ ಕೋಮಲ, ಸಹಾನುಭೂತಿಯ ಹೃದಯದಿಂದ.

ನಮ್ಮ ಪರಲೋಕದ ತಂದೆಯು ನಮ್ಮ ಪ್ರತಿಯೊಂದು ಸಮಸ್ಯೆಗಳನ್ನು ನೋಡುತ್ತಾನೆ ಮತ್ತು ಈ ಅದ್ಭುತವಾದ ವಾಗ್ದಾನವನ್ನು ನಮಗೆ ಮಾಡುತ್ತಾನೆ.

**ನೀತಿವಂತರ ರಕ್ಷಣೆ ಯೆಹೋವನಿಂದಲೇ; ಇಕ್ಕಟ್ಟಿನಲ್ಲಿ ಆತನೇ ಅವರಿಗೆ ದುರ್ಗಸ್ಥಾನ.** ಕೀರ್ತನೆ 37:39.

**ನಾನು ನಿನ್ನನ್ನು ಎಂದಿಗೂ ಕೈ ಬಿಡುವುದಿಲ್ಲ, ಎಂದಿಗೂ ತೊರೆಯುವುದಿಲ್ಲ ವೆಂದು ದೇವರು ತಾನೇ ಹೇಳಿದ್ದಾನೆ ಆದದರಿಂದ ಕರ್ತನು ನನ್ನ ಸಹಾಯಕನು ಭಯಪಡೆನು, ಮನುಷ್ಯನು ನನಗೆ ಏನು ಮಾಡಾನು? ಎಂದು ಧೈರ್ಯವಾಗಿ ಹೇಳಬಲ್ಲೆವು.** ಇಬ್ರಿಯ 13:5-6.

**ನೀನಂತು ಹೆದರಬೇಡ, ನಾನೇ ನಿನ್ನೊಂದಿಗಿದ್ದೇನೆ; ದಿಗ್ಭ್ರಮೆಗೊಳ್ಳದಿರು; ನಾನೇ ನಿನ್ನ ದೇವರು; ನಾನು ನಿನ್ನನ್ನು ಬಲ ಪಡಿಸುತ್ತೇನೆ; ಹೌದು, ನಿನಗೆ ಸಹಾಯ ಕೊಡುತ್ತೇನೆ; ನನ್ನ ಧರ್ಮದ ಬಲಗೈಯನ್ನು ನಿನಗೆ ಆಧಾರ ಮಾಡುತ್ತೇನೆ.**

**ಆಹಾ, ನಿನ್ನ ಮೇಲೆ ಕಿಡಿಕಡಿಯಾದವರು ಆಶಾಭಂಗಪಟ್ಟು ಅವಮಾನ ಹೊಂದುವರು; ನಿನ್ನ ಸಂಗಡ ವ್ಯಾಜ್ಯವಾಡಿದವರು ನಾಶವಾಗಿ ಇಲ್ಲದೆ ಹೋಗುವರು. ನಿನ್ನೊಡನೆ ಹೋರಾಡಿ ದವರನ್ನು ಹುಡುಕಿದರೂ ಅವರು ನಿನಗೆ ಕಾಣಸರು; ನಿನಗೆ ವಿರುದ್ಧವಾಗಿ ಯುದ್ಧ ಮಾಡಿದವರು ಇಲ್ಲದೆ ಹೋಗಿ ನಿರ್ನಾಮ ವಾಗುವರು.**

**ಬಾಯಾರಿ ನಾಲಿಗೆ ಒಣಗಿ ನೀರನ್ನು ಹುಡುಕಿ ಹೊಂದದ ದೀನದರಿದ್ರರಿಗೆ ಯೆಹೋವನೆಂಬ ನಾನು ಪ್ರಸನ್ನನಾಗುವೆನು ಇಸ್ರಾಯೇಲಿನ ದೇವರಾದ ನಾನು ಅವರನ್ನು ಕೈಬಿಡೆನು.** ಯೆಶಾಯ 41:10-13,17.

ಯೇಸುಕ್ರಿಸ್ತನ ಕೃಪೆಯಿಂದ ನೀವು ಯಾವುದೇ ಪರಿಸ್ಥಿತಿ, ಬಿಕ್ಕಟ್ಟು ಅಥವಾ ವಿಪತ್ತಿನ ಮೂಲಕ ಅದನ್ನು ಮಾಡಬಹುದು. ನಿಮ್ಮ ದಾರಿಯಲ್ಲಿ ಏನೇ ಬಂದರೂ, ಆತನು ನಿಮಗಾಗಿ ಸಾಕಷ್ಟು ಕೃಪೆ ಮತ್ತು ಪವಿತ್ರಾತ್ಮದ ಸಾಂತ್ವನವನ್ನು ಹೊಂದಿದ್ದಾನೆ!

**ಹೀಗಿರುವದರಿಂದ ದೇವರ ತ್ರಾಣವುಳ್ಳ ಹಸ್ತದ ಕೆಳಗೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ; ಆತನು ತಕ್ಕ ಕಾಲದಲ್ಲಿ ನಿಮ್ಮನ್ನು ಮೇಲಕ್ಕೆ ತರುವನು.** 1 ಪೇತ್ರ 5:6.

**ಹಾಗಾದರೆ ನಿಮ್ಮ ಧೈರ್ಯವನ್ನು ಬಿಟ್ಟುಬಿಡಬೇಡಿರಿ; ಅದಕ್ಕೆ ಮಹಾ ಪ್ರತಿಫಲ ಉಂಟು.** ಇಬ್ರಿಯ 10:35.

★ ★ ★

RNI NO. 70107/98, Postal Regn. No. TN/CH (C)/195/21-23 WPP NO. TN/PMG(CCR)/WPP-219/21-23

## Echo of His Call

**YouTube**
Please subscribe

Kindly view and subscribe our **Echo of His Call YouTube Channel** when you get time. Thanks.

**- Editor**

## OUR BANK DETAILS:

### *1. Bank : State Bank of India*

Branch : **Triplicane, Chennai-5**
Name : **S. Sam Selva Raj**
A/C No. : **1023 2934 679**
IFSC : **SBIN 00 00 249**
SWIFT CODE : **SBI NIN BB 455**

### *2. Bank : ICICI Bank*

Branch : **Anna Salai, Chennai-6**
Name : **Echo of His Call**
A/C No. : **6038 0502 2319**
IFSC : **ICIC 000 6038**

### *3. Bank : State Bank of India*

**(This Account is for Tax Exemption for Indians only )**

Branch : **Triplicane, Chennai-5**
Name : **Echo of His Call Educational Trust**
A/C No. : **1023 2923 805**
IFSC : **SBIN 00 00 249**

**Google Pay: 98410 71858**
**PayPal : SAM SELVA RAJ**

*****

**E.mail : sam@echoofhiscall.org**

# ECHO OF HIS CALL

Monthly magazines in 16 languages, Bible Colleges, Postal Courses, Church Planting, Village English High School, Gospel Printing Press, Crusades, Seminars, Social Services, etc.

Annual Subscription : Rs. 100/- Life Subscription : Rs. 2000/-

The multifarious activities of **Echo of His Call Ministries** are supported by the free-will offerings and donations of God's children like you. You may support **Echo of His Call** and its activities as the Lord leads you. We need your help to send forth the Gospel to the unreached people and plant Churches.

If you would like to receive **ECHO OF HIS CALL** magazines regularly, please write to us with your e.mail Id and Cell Phone number. Whenever you change your postal or e.mail addresses, please do inform us your old and new addresses.

**Echo of His Call** is available in 16 languages in our website also. You can read them by going into the site as well as downloading them and get blessed.

Your letters, prayer requests and your financial helps (**Money Orders, Cheques or Demand Drafts, NEFT, PayPal (Sam Selva Raj, sam@echoofhiscall.org) PhonePe (98410 71858), Gpay (98410 71858), Western Union, MoneyGram, etc.**) to **ECHO OF HIS CALL** may please be sent to the address below.

Please send your **Land Phone / Mobile Phone Numbers and E.mail addresses** for updation.

Our address :

**ECHO OF HIS CALL**
10, MOHAMMED ABDULLAH 2ND STREET, CHEPAUK, CHENNAI - 600 005, INDIA
PH: (+91-44) 2852 8282, 2852 9293, 2854 7766/ Cell: (+91) 98410 71852, 95661 31858 / E.mails: sam@echoofhiscall.org / biblecor@yahoo.co.in
Websites: www.echoofhiscall.org / www.stpaulsmatriculation.com

**YOU CAN SEND YOUR DONATION ONLINE ALSO**

**RNI NO. 70107/98**
**Postal Regn. No. TN/CH/(C)/195/21-23**
**WPP NO. TN/PMG(CCR)/WPP- 219/21-23**
**Date of Publication: Second week of every month**
**Date of Posting : 9th & 10th of every month**
**Posted at "Egmore RMS / 1 Patrika Channel"**
**on 11th SEPTEMBER 2023**
**If un-delivered please return to:**
**ECHO OF HIS CALL (KANNADA)**
**P.O. Box No. 2957,**
**Chepauk, Chennai - 600 005, INDIA.**
**Phone: (+ 91- 44) 2852 8282, 2852 9293, 2854 7766**

***JESUS LOVES YOU!***

**To**

*GOD BLESS YOU!*

Owned and published by **S. Sam Selva Raj** from New No. 8 & 10, Old No.18 & 19, Mohammed Abdullah 2nd Street, Chepauk, Chennai-600 005 and printed by **S. Sam Selva Raj** at **Echo of His Call Printers,** New No. 8 & 10, Old No.18 & 19, Mohammed Abdullah 2nd Street, Chepauk, Chennai-600 005. Editor: **S. Sam Selva Raj.**